ಮತ್ತು ಬಾಪು 150ನೇ ಜನ್ಮ ವರ್ಷಾಚರಣೆ ಪುಸ್ತಕ ಮಾಲಿಕೆ



ಮಹಾತ್ಮ ಗಾಂಧೀ ಮತ್ತು ಸ್ವಚ್ಛ ಭಾರತ

ಡಾ. ವೂಡೇ ಪಿ. ಕೃಷ್ಣ

ಬಾ-ಬಾಪು 150ನೇ



ವರ್ಷಾಚರಣೆ ಪುಸ್ತಕ ಮಾಲಿಕೆ

ಮಹಾತ್ಮ ಗಾಂಧಿ
ಮತ್ತು
ಸ್ವಚ್ಛ ಭಾರತ

ಡಾ. ವೂಡೇ ಪಿ. ಕೃಷ್ಣ

ಪ್ರಕಾಶಕರು
ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560001, ದೂರವಾಣಿ : 080–22261967

ಮಹಾತ್ಮ ಗಾಂಧಿ ಮತ್ತು ಸ್ವಚ್ಛ ಭಾರತ

ಲೇಖಕರು : ಡಾ. ವೂಡೇ ಪಿ. ಕೃಷ್ಣ

ಪ್ರಕಾಶಕರು : ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ

ಬೆಂಗಳೂರು – 560001, ದೂರವಾಣಿ : 080–22261967

ಮೊದಲ ಮುದ್ರಣ : 2019

ಪ್ರತಿಗಳು : 1000

ಪುಟಗಳು : 40

ಬೆಲೆ : 33/–

ISBN No : 978-81-941136-2-1

ಮುದ್ರಕರು : ಕ್ರಿಯೇಟಿವ್‌ಗೀಕ್ಸ್
ಯಾದವ ಕಾಲೇಜು ರಸ್ತೆ, ಮಾಧವನಗರ
ಬೆಂಗಳೂರು – 560001
ದೂರವಾಣಿ : 080 40927049




ಅರ್ಪಣೆ

ಶೋಷಿತ ಸಮುದಾಯಗಳ ಆಶಾಕಿರಣ, ಮಾನವ ಹಕ್ಕುಗಳ ಹೋರಾಟಗಾರ ರೇಮನ್ ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತ

ಶ್ರೀ ಬೆಜವಾಡ ವಿಲ್ಸನ್ ಅವರಿಗೆ

ಗೌರವಪೂರ್ವಕವಾಗಿ



ಮನಸ್ಸಿನಲ್ಲಿ, ಮಾತಿನಲ್ಲಿ, ಕೆಲಸದಲ್ಲಿ ಯಾರನ್ನೂ
ನೋಯಿಸಬಾರದು. ಎಲ್ಲರನ್ನೂ ಪ್ರೀತಿಸುವುದು, ಎಲ್ಲರಿಗೂ
ಒಳ್ಳೆಯದನ್ನು ಬಯಸುವುದೇ ಅಹಿಂಸಾ ಧರ್ಮ.

– ಮಹಾತ್ಮ ಗಾಂಧಿ

ನಿಮ್ಮೊಂದಿಗೆ

ಬಾ ಮತ್ತು ಬಾಪು ಅವರ 150ನೇ ವರ್ಷಾಚರಣೆಯ ಸುಸಂದರ್ಭದಲ್ಲಿ, ಗಾಂಧೀಜಿ ಅವರ ಸ್ವಚ್ಛ ಭಾರತದ ತಾತ್ವಿಕತೆ ಕುರಿತು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ ಅವರು ರಚಿಸಿ ಪ್ರಕಟಣೆಗಾಗಿ ಗಾಂಧಿ ಭವನಕ್ಕೆ ಕೊಟ್ಟಿರುವುದಕ್ಕೆ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಬಾ ಮತ್ತು ಬಾಪು 150ರ ವರ್ಷಾಚರಣೆಯ ಪುಸ್ತಕ ಪ್ರಕಟಣಾ ಮಾಲಿಕೆಯಲ್ಲಿ ಈ ಕೃತಿ ಪ್ರಕಟಿಸಲು ಹರ್ಷವಾಗುತ್ತದೆ.

ಡಾ. ವೂಡೇ ಪಿ. ಕೃಷ್ಣ ಅವರು ನಿರಂತರ ಅಧ್ಯಯನಶೀಲರು ಮತ್ತು ಅಧ್ಯಯನದ ಗ್ರಹಿಕೆಯನ್ನು ಅನುಷ್ಠಾನಗೊಳಿಸಲು ಸದಾ ಪ್ರಯತ್ನದಲ್ಲಿರುವವರಾಗಿದ್ದಾರೆ. ಭಾರತದಲ್ಲಿ ತ್ಯಾಜ್ಯ ವಿಲೇವಾರಿಯೇ ಒಂದು ಬೃಹತ್ ಯೋಜನೆಯಾಗುವುದು ಎಂಬುದನ್ನು ಯಾರೂ ಊಹಿಸಿರಲಿಲ್ಲ. ದೇಶದ ತ್ಯಾಜ್ಯ ವಿಲೇವಾರಿಯ ಸಮಸ್ಯೆ ಪ್ರತಿಯೊಬ್ಬ ಪ್ರಜೆಯ ಜವಾಬ್ದಾರಿಯೆಂಬುದನ್ನು ಅಂದು ಮಹಾತ್ಮಾಜಿ ಅವರು ಹೇಳುತ್ತಾ ಅದರ ನಿರ್ವಹಣೆಯನ್ನು ಬಹು ಆಯಾಮದಲ್ಲಿ ಮಾಡಿ ತೋರಿಸುತ್ತಾ, ಮಾಡಿಸುತ್ತಾ ಮೈಮನಸ್ಸುಗಳ ನಿರ್ಮಲತೆಯನ್ನು ದೇಶದ ಸ್ವಚ್ಛತೆಯೊಂದಿಗೆ ಬೆಸೆದಿದ್ದಾರೆ. ದಲಿತರು 'ಮಲಹೊರುವುದಕ್ಕಾಗಿ ಜನಿಸಿದ್ದಾರೆ' ಎಂಬ ಹುಸಿ ನಂಬಿಕೆಯನ್ನು ಒಡೆದು, ಅವರವರ ಮಲ, ತ್ಯಾಜ್ಯಗಳ ವಿಲೇವಾರಿ ಅವರೇ ಮಾಡಬೇಕೆಂಬುದನ್ನು ತೋರಿಸಿಕೊಟ್ಟಿದ್ದಾರೆ. ತಿದ್ದಿಕೊಳ್ಳದ ಜನರಿಗಾಗಿ, ಸರ್ಕಾರ ಹಲವು ಯೋಜನೆಗಳ ಮುಖಾಂತರ ಸುಧಾರಣಾಕ್ರಮಗಳು ಮತ್ತು ಆಧುನಿಕ ತಂತ್ರಜ್ಞಾನ ಆಳವಡಿಸುತ್ತಾ ಒಂದೇ ಜಾತಿಯವರು ಈ ಕೆಲಸ ಮಾಡುವುದನ್ನು ತಡೆದಿದೆ. ಕರ್ನಾಟಕದಲ್ಲಿ "ತಲೆ ಮೇಲೆ ಮಲ ಹೊರುವ ಪದ್ಧತಿಯನ್ನು" ನಿಷೇಧಿಸಿ, ಎಲ್ಲರೂ ಆಧುನಿಕ ಶೌಚಾಲಯ, ಸೆಪ್ಟಿಕ್ ಟ್ಯಾಂಕ್ ಕಟ್ಟಿಸಿಕೊಳ್ಳಲು ಆದೇಶಿಸಿದ

ಕರ್ನಾಟಕದ ಪೌರಾಡಳಿತ ಸಚಿವರಾದ ದಿ. ಬಿ. ಬಸವಲಿಂಗಪ್ಪ ಅವರನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದಾಗಿದೆ. ಅಂತೆಯೇ, ಪೌರ ಕಾರ್ಮಿಕರ ಸಮಸ್ಯೆಗಳು, ಶೌಚಾಲಯಗಳ ಸುಧಾರಣೆ ಕುರಿತಾಗಿ, ಇಂದಿಗೂ ಶ್ರಮಿಸುತ್ತಿರುವ ಮ್ಯಾಗ್ಸೆಸ್ಸೆ ಪ್ರಶಸ್ತಿ ಪುರಸ್ಕೃತರಾದ ಬೆಜವಾಡ ವಿಲ್ಸನ್ ಅವರನ್ನು ಅಭಿನಂದಿಸಲೇಬೇಕು. ಶೌಚಾಲಯಗಳಲ್ಲಿ ಸುಧಾರಣಾ ಕ್ರಮಗಳನ್ನು ತಂದಾಗ್ಯೂ ಇತ್ತೀಚಿನ ದಿನಗಳಲ್ಲಿ ಮಲದ ಗುಂಡಿಯಲ್ಲಿ ಬಿದ್ದು ನಿಧನರಾದ ಬಡ ಪೌರ ಕಾರ್ಮಿಕರ ಪರ ನಾವೆಲ್ಲ ಜೊತೆಗೂಡಬೇಕು. ಅದರ ವಿರುದ್ಧ ಧ್ವನಿ ಎತ್ತಬೇಕಿದೆ. ಹಾಗೆಯೇ ಅವರನ್ನು ಮಲಗುಂಡಿಗೆ ಇಳಿಸುವವರನ್ನು ಮಾನವಹಕ್ಕು ವಿರೋಧಿಗಳೆಂದೂ, ಅಪರಾಧಿಗಳೆಂದೂ ಪರಿಗಣಿಸುವಂಥಹ ಕಾನೂನು ತರಲು ಒತ್ತಾಯಿಸಬೇಕಾಗಿದೆ.

ಈ ಕೃತಿಯಲ್ಲಿ ನಿರ್ಮಲ ಭಾರತಕ್ಕಾಗಿ ಕೈಗೊಂಡ ಬೃಹತ್ ಕಾರ್ಯಗಳ ಪಕ್ಷಿನೋಟವಿದೆ. ಹಾಗೂ ಈ ಕಾರ್ಯದಲ್ಲಿ ತಮ್ಮನ್ನು ಅಜೀವ ಪರ್ಯಂತ ತೆತ್ತುಕೊಂಡ ಹೆಣ್ಣು ಮಕ್ಕಳ ಸ್ಥಿತಿಗತಿಯ ಬಗ್ಗೆ ವಿಶ್ಲೇಷಣೆ ಇದೆ. ಸ್ವಚ್ಛ ಭಾರತ್ ಮಿಶನ್‌ನ ಕಾರ್ಯಯೋಜನೆಗಳಿಂದಾಗಿ ಶಾಲೆಗೆ ಬರುವ ಹೆಣ್ಣು ಮಕ್ಕಳ ಸಂಖ್ಯೆ ಅಧಿಕಗೊಂಡಿರುವುದು ಮತ್ತು ಶಾಲೆ ಬಿಡುವವರ ಸಂಖ್ಯೆ ಇಳಿಮುಖವಾಗಿರುವುದು ಬಹುದೊಡ್ಡ ಪ್ರಗತಿಯೆನ್ನುವುದು ಕೂಡ ಆಶಾದಾಯಕ ವಿಚಾರವಾಗಿದೆ. ಭಾರತದ ಅಭಿವೃದ್ಧಿಯ ಮೂಲಭೂತ ಚಿಂತನೆಗಳೆಡೆಗೆ ಈ ಕೃತಿ ನಮ್ಮನ್ನು ಕರೆದೊಯ್ಯುವುದರಿಂದ ಅನನ್ಯವಾಗಿದೆ. ಈ ಕೃತಿಗೆ ಅಚ್ಚುಕಟ್ಟಾದ ಮುನ್ನುಡಿಯನ್ನು ಬರೆದು 'ಅಂತರಂಗ, ಬಹಿರಂಗ ಶುದ್ಧಿಯ' ಬಸವಣ್ಣನವರ ಚಿಂತನೆಯನ್ನು ಜೋಡಿಸಿದ ಡಾ. ಗಣನಾಥ ಶೆಟ್ಟಿ ಎಕ್ಕಾರು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಈ ಕೃತಿಯನ್ನು ಪ್ರಕಟಿಸಲು ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಎಲ್ಲಾ ಸದಸ್ಯರುಗಳಿಗೂ ಕೃತಜ್ಞತೆಗಳು ಸಲ್ಲುತ್ತವೆ. ಇದನ್ನು ಅಂದವಾಗಿ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್‌ನ ಮಹೇಶ್ ಮತ್ತು ತಂಡಕ್ಕೆ ಆತ್ಮೀಯ ನಮನಗಳು.

ಇಂದಿರಾ ಕೃಷ್ಣಪ್ಪ
ಗೌ॥ ಕಾರ್ಯದರ್ಶಿ

ಗಾಂಧಿ ಸ್ವಚ್ಛ ಭಾರತಕ್ಕೊಂದು ಪುಟ್ಟನುಡಿ

ಬಾ–ಬಾಪು 150ನೇ ವರ್ಷಾಚರಣೆಯ ಸಂದರ್ಭದಲ್ಲಿ ಗಾಂಧಿ ಭವನವು ಗ್ರಂಥ ಪ್ರಕಟಣೆಗಳ ಮೂಲಕ ಗಾಂಧೀಜಿ ಅವರ ಚಿಂತನೆಯನ್ನು ವಿಸ್ತರಿಸುವ ಮಹತ್ತರ ಕಾರ್ಯವನ್ನು ಕೈಗೊಂಡಿದೆ. ಗಾಂಧಿ ಅವರನ್ನು ಮತ್ತೆ ಜನಮಾನಸದತ್ತ ಕೊಂಡೊಯ್ಯುವ ಅತ್ಯುತ್ತಮ ವಿಧಾನ ಇದಾಗಿದೆ. ಇಂಥಹ ಪ್ರಕಟಣೆಗಳಿಗೆ ತಿಲಕದಂತೆ ವೂಡೇ ಪಿ. ಕೃಷ್ಣ ಅವರ 'ಮಹಾತ್ಮ ಗಾಂಧಿ ಮತ್ತು ಸ್ವಚ್ಛ ಭಾರತ' ಎಂಬ ಈ ಕೃತಿ ಸೇರ್ಪಡೆಯಾಗಿದೆ. ಗಾಂಧಿ ಭವನದ ಕೃತಿ ಪ್ರಕಟಣೆಯು ವಿರಾಟ ರೂಪವನ್ನು ಪಡೆಯಲಿ ಎಂಬ ಆಶಯದೊಂದಿಗೆ ಈ ಕೃತಿಗೆ ನಾಲ್ಕು ಮೊದಲ ಮಾತುಗಳನ್ನು ಬರೆಯಲು ಹರ್ಷವೆನಿಸುತ್ತದೆ.

ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ ಅವರು ಸಾಹಿತಿ ಹಾಗೂ ಚಿಂತಕರಾಗಿ ಗುರುತಿಸಿಕೊಂಡವರು. ಅವರ ಚಿಂತನಾಶೀಲತ್ವ ಮತ್ತು ಬರವಣಿಗೆಯ ಗಟ್ಟಿತನ ಈ ಪುಟ್ಟ ಕೃತಿಯಲ್ಲಿ ಕಾಣುತ್ತದೆ. 'ಬೊಗಸೆಯಲ್ಲಿ ಸಾಗರ' ಎಂಬ ಮಾತಿದೆ. ಒಂದು ಒಳ್ಳೆಯ ಕೃತಿ ಸಂಕ್ಷಿಪ್ತತೆಯಲ್ಲಿ ಅಗಾಧತೆಯನ್ನು ಸಾರುತ್ತದೆ. ಈ ಪುಟ್ಟ ಕೃತಿಯು ಗಾಂಧೀಜಿ ಅವರ ಸ್ವಚ್ಛತೆಯ ಪರಿಕಲ್ಪನೆಯನ್ನು ಸ್ಪಷ್ಟವಾಗಿ ಮುಂದಿಡುವಲ್ಲಿ ಸಾರ್ಥಕವಾಗಿದೆ. ಗಾಂಧೀಜಿ ಅವರು 'ಹರಿಜನ', 'ನವಯುಗ', 'ಯಂಗ್ ಇಂಡಿಯಾ' ಮೊದಲಾದ ಪತ್ರಿಕೆಗಳಲ್ಲಿ ಬರೆದ ಲೇಖನಗಳನ್ನು ಆಧಾರವಾಗಿಟ್ಟುಕೊಂಡು ಗಾಂಧೀಜಿ ಅವರ ಸ್ವಚ್ಛ ಭಾರತದ ಅಭಿಪ್ರಾಯಗಳನ್ನು ವಿಶ್ಲೇಷಿಸಲಾಗಿದೆ. ಅದರಲ್ಲೂ ಈ ಲೇಖನದ ವಿಶೇಷವಿರುವುದು 2014ರ ಬಳಿಕ ರೂಪುಗೊಂಡ ಸ್ವಚ್ಛ ಭಾರತ ಮಿಷನ್‌ನ ಕಾರ್ಯಗಳೊಂದಿಗೆ ಗಾಂಧೀಜಿ ಅವರ ಸ್ವಚ್ಛತೆಯ ಆಶಯವನ್ನು ವಿವರಿಸುವುದು. ಇದರಿಂದ ಗಾಂಧೀಜಿ ಅವರ ಚಿಂತನೆಗೆ ಒಂದು ಸಮಕಾಲೀನ ಆಯಾಮವನ್ನು ನೀಡಲಾಗಿದೆ.

ಸ್ವಚ್ಛತೆಗೂ ಭಾರತದ ಜಾತಿ ವ್ಯವಸ್ಥೆಗೂ ನಿಕಟ ಸಂಪರ್ಕವಿದೆ ಎಂದು ಗಾಂಧೀಜಿ ಅವರು ಪ್ರಬಲವಾಗಿ ನಂಬಿದ್ದರು. ಜಾತಿ ನಿರ್ಮೂಲನೆಯಿಂದ ಭಾರತದ ಹಲವು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದೆಂಬುದು ಅವರ ಖಚಿತ ಅಭಿಮತ. ಅವರು ನೈರ್ಮಲ್ಯದ ಬಗ್ಗೆ ಚಿಂತಿಸುವಾಗ ಆ ಕಾಲದ ಸಾಮಾಜಿಕ ರಚನೆಯ ಬಗ್ಗೆಯೂ ಚಿಂತಿಸಿರುವುದು ಕಂಡು ಬರುತ್ತದೆ. ಇದರಿಂದಲೇ ಅವರು "ದುಃಖದಾಯಕ ವಿಷಯವೆಂದರೆ ವೈಸ್‌ರಾಯ್ ಅವರ ಮನೆಯಲ್ಲಿ ದುಡಿಯುವ ಕೆಲಸಗಾರರು ಮತ್ತು ಕಸ ಗುಡಿಸುವವರ ಸಮುಚ್ಛಯವು ಅತ್ಯಧಿಕ ಕೊಳಕಾಗಿದೆ. ಅಧಿಕಾರಿಗಳ ಮನೆಯಷ್ಟೇ ಸೇವಕರ ಮನೆಗಳು ಸ್ವಚ್ಛ ಮತ್ತು ಶಿಸ್ತಿನಿಂದ ಕೂಡಿದ್ದರೆ ಮಾತ್ರ ನನಗೆ ತೃಪ್ತಿ ಸಾಧ್ಯ" ಎಂದಿರುವುದು. ಅವರು, ನೈರ್ಮಲ್ಯವು ಕಾಯಿಲೆಯನ್ನು ತಡೆಗಟ್ಟುವ, ಖಾಸಗಿತನವನ್ನು ಕಾಪಾಡುವ ಮತ್ತು ಗೌರವವನ್ನು ಉಳಿಸುವ ಮೂಲಭೂತ ಹಕ್ಕಾಗಿದೆ ಎಂದಿರುವುದು. ಮುಂದುವರಿದು ಸುರಕ್ಷಿತ ನೈರ್ಮಲ್ಯ ವ್ಯವಸ್ಥೆಯನ್ನು ಯಾವುದೇ ರೀತಿಯಲ್ಲಿ ಮಾನವ ಹಕ್ಕುಗಳಿಗೆ ಧಕ್ಕೆ ಬಾರದಂತೆ ನೋಡಿಕೊಳ್ಳಬೇಕಾಗಿದೆ ಎಂದಿರುವುದು.


ನೈರ್ಮಲ್ಯವು ಬಾಹ್ಯ ಕ್ರಿಯೆಯಾಗಿರುವಂತೆ ಒಂದು ರೀತಿಯ ಆಂತರಿಕ ಯೋಚನೆಯೂ ಹೌದು. ಇದರಿಂದಲೇ ಗಾಂಧೀಜಿ ಅವರು "ನಡವಳಿಕೆ ಬದಲಾವಣೆಯು ಎಲ್ಲಾ ನೈರ್ಮಲ್ಯ ಕಾರ್ಯಕ್ರಮಗಳ ಬದಲಾವಣೆಗೆ ರಹದಾರಿಯಾಗಿದೆ" ಎಂದು ಸ್ವಚ್ಛತೆಯು ಅತಿ ಅಗತ್ಯತೆ ಅಂಶವಾಗಿದೆ ಎಂದಿರುವುದು. ಇಂದು ಸ್ವಚ್ಛತಾ ಆಂದೋಲನದ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು. ಪ್ರಧಾನ ಮಂತ್ರಿ ಅವರ ಕರೆಯ ಮೇರೆಗೆ ಅಲ್ಲಲ್ಲಿ ನಡೆಯುವ ಸ್ವಚ್ಛತೆ ಕೇವಲ ಬಾಹ್ಯ ಕ್ರಿಯೆ. ಆದರೆ ಅದನ್ನು ಅಂತರಂಗಕ್ಕೆ ಆಹ್ವಾನಿಸಿಕೊಂಡು ನಿಜ ಚಿಂತನೆಯೊಂದಿಗೆ ಕಾರ್ಯರೂಪಕ್ಕೆ ತರುವುದು ಅತಿ ಅಗತ್ಯ. ಬಸವಣ್ಣ ಅವರ 'ಅಂತರಂಗ ಶುದ್ಧಿ ಮತ್ತು ಬಹಿರಂಗ ಶುದ್ಧಿ'ಯ ಕುರಿತಾದ ಚಿಂತನೆ ಇದಕ್ಕೆ ಪೂರಕವಾಗಿದೆ. ಗಾಂಧೀಜಿ ಅವರು ಸ್ವಚ್ಛತೆಯನ್ನು ಕೇವಲ ಬಾಹ್ಯ ಚಟುವಟಿಕೆಯಾಗಿ ನೋಡದೆ ಅದನ್ನು

ಮಾನಸಿಕ ಮತ್ತು ಅಂತರಂಗದ ನಡವಳಿಕೆಯಾಗಿಯೂ ಗ್ರಹಿಸಿದ್ದಾರೆ. ಗಾಂಧೀಜಿ ಅವರ ನೈರ್ಮಲ್ಯದ ಕುರಿತಾದ ಚಿಂತನೆಗಳು ಸ್ವಚ್ಛ ಭಾರತ ಕಲ್ಪನೆಗೆ ದಾರಿದೀಪವಾಗಿದೆ.

1951ರಲ್ಲಿ ಹರಿದ್ವಾರದಲ್ಲಿ ನಡೆದ ಕುಂಭಮೇಳವನ್ನು ಕಂಡ ಗಾಂಧೀಜಿ ಅವರು "ಇಲ್ಲಿ ನಿರ್ಲಕ್ಷ ಮನಸ್ಸು, ವಿಚಾರದಿಂದ ಆಗಿದೆ ಮತ್ತು ಸ್ತ್ರೀ ಪುರುಷರು ನಿಶ್ಯಬ್ದದಿಂದ ಕೂತು ದೇವರನ್ನು ಕಾಣುವ ಬದಲಾಗಿ ಯಾವುದೋ ಕಾರ್ಯದಲ್ಲಿ ತೊಡಗಿದ್ದಾರೆ. ಅವರು ಧರ್ಮ, ವಿಜ್ಞಾನ ಮತ್ತು ನೈರ್ಮಲ್ಯದ ಕಾನೂನನ್ನು ಉಲ್ಲಂಘಿಸುತ್ತಿದ್ದರು" ಎಂದು ದಿಟ್ಟವಾಗಿ ಹೇಳಿರುವುದು ಧಾರ್ಮಿಕ ಆಚರಣೆಗಿಂತಲೂ ನೈರ್ಮಲ್ಯ ಪ್ರಧಾನ ಎಂಬ ಪ್ರತಿಪಾದನೆ ಇಂದಿನವರಿಗೆ ಒಳ್ಳೆಯ ಕಿವಿಮಾತಾಗಿದೆ. ಪ್ರಸ್ತುತ ಲೇಖನದಲ್ಲಿ ಇದನ್ನು ಸ್ಪಷ್ಟವಾಗಿ ಕಂಡುಕೊಳ್ಳಬಹುದಾಗಿದೆ.

ಇಂಥ ಹಲವು ಅಪರೂಪದ ವಿವರಗಳೊಂದಿಗೆ ಪುಸ್ತಕವು ಗಾಂಧೀಜಿ ಅವರ ನೈರ್ಮಲ್ಯದ ಚಿಂತನೆಗಳನ್ನು ಖಚಿತವಾಗಿ ಮುಂದಿಟ್ಟಿದೆ. ಈ ಪುಟ್ಟ ಕೃತಿ ರಚನೆಗೆ ಲೇಖಕರ ಓದಿನ ಶ್ರಮವು ಕಾಣಿಸುತ್ತಿದೆ. ಗಾಂಧೀಜಿ ಅವರ ಸ್ವಚ್ಛತೆಯ ಕಲ್ಪನೆಗೆ ಸ್ಪಷ್ಟ ಮತ್ತು ಖಚಿತವಾದ ವ್ಯಾಖ್ಯಾನವಿದೆ. ಈ ಕಾರಣದಿಂದ ಡಾ. ವೂಡೇ ಪಿ. ಕೃಷ್ಣ ಅವರನ್ನು ಅಬಿನಂಧಿಸುತ್ತೇನೆ. ಮೊದಲ ಎರಡು ಮಾತುಗಳಿಗೆ ಅವಕಾಶ ನೀಡಿದ ಈ ಪ್ರಕಟಣೆಯ ಮಾರ್ಗದರ್ಶಕರು, ಗಾಂಧಿ ಸ್ಮಾರಕ ನಿಧಿಯ ಕಾರ್ಯದರ್ಶಿಗಳಾದ ಶ್ರೀಮತಿ ಇಂದಿರಾ ಕೃಷ್ಣಪ್ಪ ಅವರಿಗೆ ಕೃತಜ್ಞತೆಗಳು.

ಡಾ, ಗಣನಾಥ ಶೆಟ್ಟಿ ಎಕ್ಕಾರು
ರಾಜ್ಯ ಎನ್.ಎಸ್.ಎಸ್. ಅಧಿಕಾರಿ
ಸರ್ಕಾರದ ಜಂಟಿ ಕಾರ್ಯದರ್ಶಿ, ಕರ್ನಾಟಕ ಸರ್ಕಾರ



ಎಲ್ಲಕ್ಕಿಂತಲೂ ಹೆಚ್ಚಾಗಿ ನೀವು ಶುದ್ಧವಾಗಿರಬೇಕು,
ನಿರ್ಮಲರಾಗಿರಬೇಕು ಮತ್ತು ಜೀವನದ ಪರಿವೆಯಿಲ್ಲದೇ ಕೊಟ್ಟ
ಮಾತನ್ನು ನಡೆಸುವುದನ್ನು ನೀವು ಕಲಿಯಬೇಕು.

– ಮಹಾತ್ಮ ಗಾಂಧಿ

ಪರಿವಿಡಿ



"ಜೀವನವೆಂದರೆ ಆಕಾಂಕ್ಷೆ. ಚಿತ್ರ, ಸಿದ್ಧಿ, ಆತ್ಮಸಾಕ್ಷಾತ್ಕಾರಗಳಿಗಾಗಿ ಹೆಣಗುವುದೇ ಅದರ ಧ್ಯೇಯವಾಗಿದೆ. ನಮ್ಮ ಲೋಪದೋಷಗಳ ಮೂಲಕ ನಾವು ಆ ಉಚ್ಚ ಧ್ಯೇಯವನ್ನು ಕೆಳಗಿಳಿಸಕೂಡದು. ಅಂಥ ನನ್ನ ಲೋಪದೋಷಗಳ ಪೂರ್ಣ ಅರಿವು ನನಗೆ ಇದೆ. ಅವುಗಳನ್ನು ಹೋಗಲಾಡಿಸಲು ನಾನು ಸತ್ಯದೇವತೆಯನ್ನು ಮೂಕ ಪ್ರಾರ್ಥನೆಯಿಂದ ಆರಾಧಿಸುತ್ತಿರುವೆ".

– ಮಹಾತ್ಮ ಗಾಂಧಿ

ಮಹಾತ್ಮ ಗಾಂಧಿ ಮತ್ತು ಸ್ವಚ್ಛ ಭಾರತ

ಶಾಂತಿಯುತ ಚಳುವಳಿಯ ನೇತೃತ್ವ ವಹಿಸುವ ಮೂಲಕ 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ತಂದಂಥ ಮಹಾತ್ಮಾ ಗಾಂಧೀಜಿ ಅವರು ಭಾರತದಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಸುಧಾರಿಸುವ ಬಗ್ಗೆ ಯಾವಾಗಲೂ ಒತ್ತು ಕೊಟ್ಟು ಮಾತನಾಡುತ್ತಿದ್ದರು. "ರಾಜಕೀಯ ಸ್ವಾತಂತ್ರ್ಯಕ್ಕಿಂತ ನೈರ್ಮಲ್ಯೀಕರಣ ಹೆಚ್ಚು ಮಹತ್ವದ್ದು" ಎಂದು ಅವರು ಹೇಳುತ್ತಿದ್ದರು.

ಉತ್ತಮ ನೈರ್ಮಲ್ಯೀಕರಣ ಆರೋಗ್ಯದ ದೃಷ್ಟಿಯಿಂದ ಅತ್ಯವಶ್ಯ ಸೋಂಕು ನಿವಾರಣೆಯಿಂದ ಹಿಡಿದು, ಮಾನಸಿಕ ಹಾಗೂ ಸಾಮಾಜಿಕ ಸ್ವಾಸ್ತ್ಯತ್ತ್ಯವನ್ನು ಸುಧಾರಿಸಲು ಹಾಗು ನಿರ್ವಹಿಸಲು ನೈರ್ಮಲ್ಯೀಕರಣದ ಪಾತ್ರ ಮಹತ್ವದ್ದಾಗಿದೆ. ಸುರಕ್ಷಿತ ನೈರ್ಮಲ್ಯೀಕರಣದ ಕೊರತೆ ಅತಿಸಾರಕ್ಕೆ ಕಾರಣವಾಗಬಹುದು. ಬಡ ಹಾಗೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಅತಿಸಾರವು ಬಹಳ ದೊಡ್ಡ ಸಾರ್ವಜನಿಕ ಆರೋಗ್ಯದ ಸಮಸ್ಯೆಯಾಗಿದೆ ಏಕೆಂದರೆ, ಇಂತಹ ದೇಶಗಳಲ್ಲಿ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಅನಾರೋಗ್ಯಕ್ಕೆ ಮತ್ತು ಸಾವಿಗೆ ಅತಿಸಾರ ಅತಿದೊಡ್ಡ ಕಾರಣವಾಗಿದೆ.

ಸೂಕ್ತ ನೈರ್ಮಲ್ಯದ ಕೊರತೆಯು ಉಷ್ಣವಲಯದ ಹಲವು ನಿರ್ಲಕ್ಷಿತ ಕಾಯಿಲೆಗಳನ್ನು ನಮಗೆ ಕೊಡುಗೆಯಾಗಿ ನೀಡುತ್ತದೆ. ಜೊತೆಗೆ ಅಪೌಷ್ಟಿಕತೆಯಂತಹ ಗಂಭೀರ ಪರಿಣಾಮವನ್ನೂ ಉಂಟುಮಾಡಬಲ್ಲದು ಸೂಕ್ತ ನೈರ್ಮಲ್ಯದ ಸೌಲಭ್ಯಗಳ ಕೊರತೆಯು,

ಮಾನಸಿಕ ಆತಂಕಕ್ಕೂ ಮುಖ್ಯ ಕಾರಣವಾಗಬಲ್ಲದು. ಅದರಲ್ಲೂ ಮುಖ್ಯವಾಗಿ ಹೆಣ್ಣು ಮಕ್ಕಳು ಹೆಚ್ಚು ಮಾನಸಿಕ ಒತ್ತಡಕ್ಕೆ ಒಳಗಾಗುವ ಸಾಧ್ಯತೆ ಇದೆ. ಈ ಎಲ್ಲಾ ಕಾರಣಗಳಿಂದಾಗಿ ನೈರ್ಮಲ್ಯವು ಕಾಯಿಲೆಯನ್ನು ತಡೆಗಟ್ಟುವ, ಖಾಸಗಿತನವನ್ನು ಕಾಪಾಡುವ ಮತ್ತು ಗೌರವವನ್ನು ಉಳಿಸುವ ಮೂಲಭೂತ ಹಕ್ಕಾಗಿದೆ.

ನೈರ್ಮಲ್ಯವನ್ನು, "ಮಾನವನ ಮೂತ್ರ ಹಾಗು ಮಲವನ್ನು ಸುರಕ್ಷಿತವಾಗಿ ವಿಲೇವಾರಿ ಮಾಡುವ ಸೇವೆ ಹಾಗೂ ಸೌಲಭ್ಯಗಳನ್ನು ಪಡೆಯುವ ವಿಧಾನ" ಎಂದು ವ್ಯಾಖ್ಯಾನಿಸಬಹುದು. ಒಂದು ಸುರಕ್ಷಿತ ನೈರ್ಮಲ್ಯ ವ್ಯವಸ್ಥೆಯು, ಮಾನವನ ಮಲವನ್ನು ಮನುಷ್ಯ ಸಂಪರ್ಕದಿಂದ ದೂರವಿರಿಸಿ, ಅದನ್ನು ವಿಲೇವಾರಿ ಮಾಡುವ ಎಲ್ಲ ಹಂತಗಳನ್ನು ಒಳಗೊಂಡಿರುತ್ತದೆ. ಅಂದರೆ ಶೌಚಾಲಯದಿಂದ ಸಂಗ್ರಹಿಸುವುದು, ಸಾಗಿಸುವಿಕೆ, ಸಂಸ್ಕರಣೆ, ಅಂತಿಮ ವಿಲೇವಾರಿ ಅಥವಾ ಪುನರ್‌ಬಳಕೆ. ಸುರಕ್ಷಿತ ನೈರ್ಮಲ್ಯ ವ್ಯವಸ್ಥೆಯು ಈ ಎಲ್ಲಾ ಅಗತ್ಯತೆಗಳನ್ನು ಒಳಗೊಂಡಿರಬೇಕು ಹಾಗೂ ಯಾವುದೇ ರೀತಿಯಲ್ಲಿ ಮಾನವ ಹಕ್ಕುಗಳಿಗೆ ಧಕ್ಕೆ ಬರದಂತೆ ನೋಡಿಕೊಳ್ಳಬೇಕು.

"ನಡುವಳಿಕೆಯಲ್ಲಿ ಬದಲಾವಣೆ" ಎಲ್ಲ ನೈರ್ಮಲ್ಯ ಕಾರ್ಯಕ್ರಮಗಳಲ್ಲಿ ಅತಿ ಅಗತ್ಯತೆಯ ಅಂಶವಾಗಿದೆ. ಜೊತೆಗೆ ಸುರಕ್ಷಿತ ನೈರ್ಮಲ್ಯದ ಬಳಕೆ ಹಾಗೂ ಅಳವಡಿಕೆಯನ್ನು ಮತ್ತಷ್ಟು ಬಲಪಡಿಸುವ ಸಂಗತಿಯೂ ಆಗಿದೆ. ನೈರ್ಮಲ್ಯಕ್ಕೆ ಚಟುವಟಿಕೆಗಳನ್ನು ಕೈಗೊಳ್ಳುವಲ್ಲಿ ಸರ್ಕಾರಗಳ ಪಾತ್ರ ಬಹು ದೊಡ್ಡದು. ಸಮನ್ವಯ ಸಾಧಿಸುವುದು ಮತ್ತು ಎಲ್ಲರನ್ನೂ ಒಂದುಗೂಡಿಸುವುದು ಅವುಗಳ ಜವಾಬ್ದಾರಿ. ಜೊತೆಗೆ ಅವು ಸೂಕ್ತ ನಾಯಕತ್ವ ಒದಗಿಸಬೇಕು ಹಾಗೂ ಹಣ ಹೂಡಿಕೆ ಮಾಡಬೇಕು.

"ನೀವು ಎಲ್ಲಿಯವರೆಗೆ ಕಸಬರಿಗೆ ಮತ್ತು ಬುಟ್ಟಿಯನ್ನು ಕೈಯಲ್ಲಿ ಹಿಡಿಯುವುದಿಲ್ಲವೋ ಅಲ್ಲಿಯವರೆಗೆ ನಿಮ್ಮ ನಗರವನ್ನು ಸ್ವಚ್ಛವಾಗಿಡಲು ಸಾಧ್ಯವಿಲ್ಲ" ಎಂದು ಗಾಂಧೀಜಿ ಹೇಳಿದ್ದರು.

ಮಾಡೆಲ್ ಸ್ಕೂಲ್‌ಗೆ ಒಮ್ಮೆ ಗಾಂಧೀಜಿ ಅವರು ಭೇಟಿ ಕೊಟ್ಟಿದ್ದರು. ಆ ಸಮಯದಲ್ಲಿ ಅವರು ಅಲ್ಲಿನ ಶಿಕ್ಷಕರಿಗೆ ಹೀಗೆ ಹೇಳಿದ್ದರು. "ನೀವು ನಿಮ್ಮ ಶಾಲೆಯನ್ನು ಮಾದರಿ ಶಾಲೆಯನ್ನಾಗಿ ಮಾಡಬೇಕೆಂದರೆ ಮಕ್ಕಳಿಗೆ ಕೇವಲ ಅಕ್ಷರಾಭ್ಯಾಸ ಮಾಡಿಸಿದರೆ ಮಾತ್ರ ಸಾಕಾಗುವುದಿಲ್ಲ. ಜೊತೆಗೆ ಅವರನ್ನು ಅಡುಗೆ ಮಾಡುವವರು ಹಾಗೂ ಕಸ ಗುಡಿಸುವವರನಾಗಿ ಸಹ ಮಾಡಬೇಕು."

ವಿದ್ಯಾರ್ಥಿಗಳಿಗೆ ಅವರ ಉಪದೇಶ ಹೀಗಿತ್ತು. "ನೀವೇ ಸ್ವಂತ ಕಸಗುಡಿಸುವವರಾದರೆ ನಿಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಇಡಬಹುದು. ವಿಕ್ಟೋರಿಯಾ ಕ್ರಾಸ್ ಗೆಲ್ಲುವುದಕ್ಕಿಂತ ಹೆಚ್ಚು ಧೈರ್ಯ, ಒಬ್ಬ ಪರಿಣಿತ ಕಸ ಗುಡಿಸುವವನಿಗೆ ಬೇಕು."

ಭಾರತದ ನಾಲ್ಕು ನಗರಗಳಲ್ಲಿ ಸರದಿ ಪ್ರಕಾರ ನಡೆಯುವ ತ್ರೈವಾರ್ಷಿಕ ಹಬ್ಬವಾದ ಕುಂಭ ಮೇಳಕ್ಕೆ ಗಾಂಧೀಜಿ ಅವರು 1915ರಲ್ಲಿ ಭೇಟಿ ನೀಡಿದ್ದರು. ಆ ವರ್ಷ ಕುಂಭ ಮೇಳವು ಭಾರತದ ಉತ್ತರದ ಗಂಗಾನದಿಯ ದಡದಲ್ಲಿರುವ ಹಾಗೂ ಹಿಂದೂಗಳ ಪವಿತ್ರ ನಗರವಾದ ಹರಿದ್ವಾರದಲ್ಲಿ ಆಯೋಜನೆಗೊಂಡಿತ್ತು. ಅಲ್ಲಿ ಲಕ್ಷಗಟ್ಟಲೆ ಭಕ್ತರು ತಮ್ಮ ಪಾಪ ಕಳೆಯಲು ಪವಿತ್ರ ನದಿಯಲ್ಲಿ ಮುಳುಗೇಳುತ್ತಿರುವುದನ್ನು ಕಂಡ ಗಾಂಧೀಜಿ ಅವರು ನಂತರದಲ್ಲಿ **'Young India'** ಅವರ ಇಂಗ್ಲೀಷ್ ವಾರಪತ್ರಿಕೆಯಲ್ಲಿ ಹೀಗೆ ಬರೆಯುತ್ತಾರೆ. "ನಾನು ತುಂಬಾ ನಂಬಿಕೆ ಹಾಗೂ ಗೌರವದಿಂದ ಕುಂಭ ಮೇಳಕ್ಕೆ ಹೋಗಿದ್ದೆ, ಅಲ್ಲಿ ನನಗೆ ಗಂಗೆಯ ಪವಿತ್ರತೆ ಮತ್ತು ಹಿಮಾಲಯದ ಭವ್ಯತೆಯ ಅರಿವಾಯಿತು. ಆದರೆ ಆ ಪವಿತ್ರ ಜಾಗದಲ್ಲಿ ಮಾನವರು ಮಾಡುತ್ತಿರುವುದು ನನಗೆ

ಯಾವ ದೃಷ್ಟಿಯಿಂದಲೂ ಪ್ರೇರಕವಾಗಿ ಕಾಣಲಿಲ್ಲ. ನನ್ನ ದುರಾದೃಷ್ಟಕ್ಕೆ ನನಗೆ ಅಲ್ಲಿ ದೈಹಿಕ ಅಶುಚಿತ್ವವಷ್ಟೇ ಕಂಡಿತು. ವಿಚಾರಹೀನ, ನಿರ್ಲಕ್ಷ ಮನಸ್ಸಿನ ಸ್ತ್ರೀ ಪುರುಷರು, ನಿಶ್ಯಬ್ದದಿಂದ ಕೂತು ದೇವರನ್ನು ಕಾಣುವ ಬದಲು, ಯಾವುದೋ ಕಾರ್ಯಗಳಲ್ಲಿ ತೊಡಗಿದ್ದರು. ಅವರು ಧರ್ಮ, ವಿಜ್ಞಾನ ಮತ್ತು ನೈರ್ಮಲ್ಯದ ಕಾನೂನನ್ನು ಉಲ್ಲಂಘಿಸುತ್ತಿದ್ದರು."

ಭಾರತ ಸರ್ಕಾರಕ್ಕೆ ಗಂಗೆಯನ್ನು ಶುಚಿಗೊಳಿಸುವುದು ಪ್ರಸಕ್ತ ವರ್ಷಗಳಲ್ಲಿ ರಾಷ್ಟ್ರೀಯ ಮಹತ್ವದ ವಿಚಾರವಾಗಿದೆ. 1925ರಲ್ಲಿ ಗಾಂಧೀಜಿ ಅವರು 'ನವಜೀವನ' ವಾರಪತ್ರಿಕೆಯಲ್ಲಿ (ಈ ವಾರಪತ್ರಿಕೆಗೆ 1919ರಿಂದ ಗಾಂಧೀಜಿ ಅವರು ಸಂಪಾದಕರಾಗಿದ್ದರು.) ಶೌಚಾಲಯದಲ್ಲಿ ಶುಚಿತ್ವದ ಮಹತ್ವದ ಬಗ್ಗೆ ಹೀಗೆ ಬರೆಯುತ್ತಾರೆ.: "ನಮ್ಮ ಮನೆಯ ಹಾಲ್‌ನಷ್ಟೇ ನಮ್ಮ ಶೌಚಾಲಯ ಸಹ ಶುಚಿಯಾಗಿರಬೇಕು ಎನ್ನುವುದನ್ನು ನಾನು 35 ವರ್ಷಗಳ ಹಿಂದೆಯೇ ಕಲಿತಿದ್ದೆ. ಇದನ್ನು ನಾನು ಪಶ್ಚಿಮದವರನ್ನು ನೋಡಿ ಕಲಿತಿದ್ದು."

"ನಮ್ಮ ಬಹಳಷ್ಟು ರೋಗಗಳಿಗೆ ಕಾರಣ ನಮ್ಮ ಶೌಚಾಲಯದ ಅಶುಚಿತ್ವ ಮತ್ತು ಮಲವನ್ನು ಎಲ್ಲೆಂದರಲ್ಲಿ ಬಿಸಾಡುವುದು ಪರಿಪಾಠ. ಆದ್ದರಿಂದ ನಾನು, ಶೌಚದ ವಿಷಯದಲ್ಲಿ ಸ್ವಚ್ಛ ಪರಿಸರದ ಅಗತ್ಯತೆಯನು ಮತ್ತು ಶುಚಿಯಾದ ವಸ್ತುಗಳ ಬಳಕೆಯ ಅವಶ್ಯಕತೆಯನ್ನು ನಂಬುತ್ತೇನೆ.

ಪಶ್ಚಿಮ ಬಂಗಾಳ ರಾಜ್ಯದ, ಬರ್ಭುಮ್ ಎನ್ನುವ ಹಳ್ಳಿಯಲ್ಲಿ ವಾಸಿಸುವ ವ್ಯಕ್ತಿಯೊಬ್ಬನಿಂದ 1937ರಲ್ಲಿ ಗಾಂಧೀಜಿ ಅವರಿಗೆ ಪತ್ರವೊಂದು ಬಂದಿತ್ತು. "ಮಾದರಿ ಗ್ರಾಮದ ಪರಿಕಲ್ಪನೆಯನ್ನು ತಾವು ಹೇಗೆ ಗ್ರಹಿಸುತ್ತೀರಿ ಹಾಗೂ ತಮ್ಮ ಪ್ರಕಾರ ಭಾರತದ ಹಳ್ಳಿಗಳನ್ನು ಯಾವ ಸಮಸ್ಯೆಗಳು ಕಾಡುತ್ತಿವೆ?" ಎಂದು ಆ ಪತ್ರ ಬರೆದವನು ಕೇಳಿದ್ದ.

ಆ ಪತ್ರಕ್ಕೆ ಗಾಂಧೀಜಿ ಅವರು 'ಹರಿಜನ' ವಾರಪತ್ರಿಕೆಯ 1937ರ ಸಂಚಿಕೆಯೊಂದರಲ್ಲಿ ಈ ರೀತಿ ಉತ್ತರ ನೀಡಿದ್ದರು. (ಈ ಪತ್ರಿಕೆಗೆ 1930ರಿಂದ ಗಾಂಧೀಜಿ ಅವರು ಸಂಪಾದಕರಾಗಿದ್ದರು.) "ಯಾವ ಗ್ರಾಮ ಪರಿಪೂರ್ಣ ನೈರ್ಮಲ್ಯವನ್ನು ಹೊಂದಿರುತ್ತದೆಯೋ, ಅದೇ ಮಾದರಿ ಗ್ರಾಮ. ಹಳ್ಳಿಯ ಜನ ಮೊಟ್ಟಮೊದಲು ತಮ್ಮಲ್ಲಿಯ ನೈರ್ಮಲ್ಯ ಸಮಸ್ಯೆಯನ್ನು ಪರಿಹರಿಸಲು ಕೆಲಸ ಮಾಡಬೇಕು.

ಅವರು ಬರೆಯುತ್ತಾರೆ; "ಒಬ್ಬ ಹಳ್ಳಿಯವನು ಸ್ವಯಂ ಪ್ರೇರಿತ ನೈರ್ಮಲ್ಯ ಕಾರ್ಮಿಕರಾದರೆ, ಆಗ ಆತ ರಾತ್ರಿ ಮಣ್ಣನ್ನು ಸಂಗ್ರಹಿಸಿ ಅದನ್ನು ಗೊಬ್ಬರವಾಗಿ ಪರಿವರ್ತಿಸಲು ಹಾಗೂ ಹಳ್ಳಿಯ ರಸ್ತೆಗಳನ್ನು ಗುಡಿಸಲು ಆರಂಭಿಸುತ್ತಾನೆ. ಆತನು ಹಳ್ಳಿಯ ಜನರಿಗೆ ದೈನಂದಿನ ಚಟುವಟಿಕೆಗಳನ್ನು ಹೇಗೆ ಮಾಡಬೇಕು, ನೈರ್ಮಲ್ಯದ ಮಹತ್ವ ಹಾಗೂ ನೈರ್ಮಲ್ಯವನ್ನು ನಿರ್ಲಕ್ಷಿಸುವುದರಿಂದ ಆಗುವ ಅಪಾಯದ ಬಗ್ಗೆ ಎಚ್ಚರಿಸುತ್ತಾನೆ. ಯಾರು ಕೇಳಲಿ ಬಿಡಲಿ, ಆ ಕೆಲಸಗಾರ ತನ್ನ ಕಾರ್ಯ ಮುಂದುವರಿಸುವುದನ್ನು ಮಾತ್ರ ನಿಲ್ಲಿಸುವುದಿಲ್ಲ.

ಅಧಿಕಾರಿಗಳ ಬಂಗಲೆಗಳಲ್ಲಿ ಎಷ್ಟು ನೈರ್ಮಲ್ಯ ಇರುತ್ತದೆಯೋ ಅಷ್ಟೇ ಪ್ರಮಾಣದ ನೈರ್ಮಲ್ಯ ಆ ಬಂಗಲೆಯ ಪಕ್ಕದಲ್ಲಿರುವ ಕೆಲಸಗಾರರ ಮನೆಗಳಲ್ಲೂ ಇರಬೇಕು ಎಂದು ಗಾಂಧೀಜಿ ಅವರು 1946ರ ಸೆಪ್ಟೆಂಬರ್‌ನಲ್ಲಿ ನವದೆಹಲಿಯಲ್ಲಿ ತಮ್ಮ ಭಾಷಣವೊಂದರಲ್ಲಿ ಹೇಳಿದ್ದರು. "ದುಃಖದಾಯಕ ವಿಷಯವೆಂದರೆ ವೈಸ್‌ರಾಯ್ ಅವರ ಮನೆಯಲ್ಲಿ ದುಡಿಯುವ ಕೆಲಸಗಾರರು ಮತ್ತು ಕಸಗುಡಿಸುವವರ ವಸತಿ ಸಮುಚ್ಛಯವು ಅತ್ಯಂತ ಕೊಳಕಾಗಿದೆ. ಅಧಿಕಾರಿಗಳ ಸೇವಕರ ಮನೆಗಳೂ ಸ್ವಚ್ಛ ಮತ್ತು ಶಿಸ್ತಿನಿಂದ ಕೂಡಿರುವ ದೃಶ್ಯ ಮಾತ್ರ ನನಗೆ ತೃಪ್ತಿ ಕೊಡಲು ಸಾಧ್ಯ' ಎಂದು ಅವರು ನುಡಿದಿದ್ದರು.

ಒಮ್ಮೆ ಗಾಂಧೀಜಿ ಅವರ ಆಶ್ರಮದ ಬಳಿಯಿರುವ ಹಳ್ಳಿಯವರು ಮಲವನ್ನು ಮಣ್ಣಿನಿಂದ ಮುಚ್ಚಲು ನಿರಾಕರಿಸುತ್ತಾರೆ "ಇದು ಭಂಗಿಯವರು ಮಾಡುವ ಕೆಲಸ. ಅವರ ಮುಖ ನೋಡುವುದೂ ಸಹ ಪಾಪದ ಕೆಲಸ" ಎಂದೆಲ್ಲಾ ನಿಂದಿಸುತ್ತಾರೆ. ಆಗ ಗಾಂಧಿ ಅವರು ತಾವೇ ಆ ಕಾರ್ಯದ ಮೇಲ್ವಿಚಾರಣೆ ವಹಿಸಿಕೊಳ್ಳುತ್ತಾರೆ. ತಾವೇ ಎಲ್ಲರಿಗೂ ಮಾದರಿಯಾಗಬೇಕೆಂದು ಹಲವು ತಿಂಗಳು ಕಾಲ ಬುಟ್ಟಿ ಮತ್ತು ಕಸಬರಿಕೆಯೊಂದಿಗೆ ಹಳ್ಳಿಗೆ ಹೋಗುತ್ತಾರೆ. ಅವರಿಗೆ ಸ್ನೇಹಿತರು ಮತ್ತು ಅತಿಥಿಗಳೂ ಸಹಕಾರ ನೀಡುತ್ತಾರೆ. ಅವರೆಲ್ಲಾ ಸೇರಿ ಬುಟ್ಟಿ ತುಂಬಾ ಕಸ-ಕೊಳೆ, ಮಲವನ್ನು ತಂದು ಗುಂಡಿಯಲ್ಲಿ ಮುಚ್ಚುತ್ತಾರೆ.

ಅವರ ಆಶ್ರಮದ ಎಲ್ಲ ಸ್ವಚ್ಛತಾ ಕಾರ್ಯಗಳೂ ಅಲ್ಲಿ ವಾಸಿಸುವವರಿಂದಲೇ ನಡೆಯುತ್ತಿದ್ದವು. ಗಾಂಧಿ ಅವರು ಮಾರ್ಗದರ್ಶನ ಮಾಡುತ್ತಿದ್ದರು. ಹಲವು ಮತ, ಧರ್ಮ, ಬಣ್ಣಗಳ ಜನರು ಅಲ್ಲಿ ವಾಸಿಸುತ್ತಿದ್ದರು. ಆಶ್ರಮದಲ್ಲೆಲ್ಲೂ ಕೊಳೆ ಕಾಣುತ್ತಿರಲಿಲ್ಲ. ಎಲ್ಲ ವ್ಯರ್ಥ ವಸ್ತುಗಳನ್ನು ಗುಂಡಿಗಳಲ್ಲಿ ಹಾಕಲಾಗುತ್ತಿತ್ತು. ತರಕಾರಿ ಸಿಪ್ಪೆ ಮತ್ತು ಉಳಿದ ಆಹಾರ ಪದಾರ್ಥಗಳನ್ನು ಅವುಗಳಲ್ಲಿ ಮಾಡಲಾದ ಗೊಬ್ಬರ ಗುಂಡಿಯಲ್ಲಿ ಹಾಕಲಾಗುತ್ತಿತ್ತು. ಮಾನವ ಮಲವನ್ನು ಹೂತು ಹಾಕಿ ಗೊಬ್ಬರದಂತೆ ಬಳಸಲಾಗುತ್ತಿತ್ತು. ಆದ್ದರಿಂದ ಸರಿಯಾದ ಒಳಚರಂಡಿ ವ್ಯವಸ್ಥೆ ಇಲ್ಲದಿದ್ದರೂ ಸಹ ತೋಟವು ಕ್ರಿಮಿಕೀಟ, ಸೊಳ್ಳೆಗಳಿಂದ ಮುಕ್ತವಾಗಿತ್ತು.

ಗಾಂಧಿ ಮತ್ತು ಅವರ ಸಹವಾಸಿಗಳು ಗುಡಿಸುವ ಕಾರ್ಯವನ್ನು ಸರದಿಯಲ್ಲಿ ಮಾಡುತ್ತಿದ್ದರು. ಬಕೆಟ್ ಶೌಚಾಯಲ ಮತ್ತು ಎರಡು ಕಂದಕಗಳುಳ್ಳ ಶೌಚಾಲಯ ಎನ್ನುವ ನೂತನ ವಿಧಾನವನ್ನು ಅವರು ಪರಿಚಯಿಸಿದರು. ಅವರು ತಮ್ಮ ಈ ಹೊಸ ಅನ್ವೇಷಣೆಯನ್ನು ಆಶ್ರಮಕ್ಕೆ ಭೇಟಿ ಕೊಡುತ್ತಿದ್ದ ಎಲ್ಲರಿಗೂ ಹೆಮ್ಮೆಯಿಂದ ತೋರಿಸುತ್ತಿದ್ದರು. ಬಡವ

ಶ್ರೀಮಂತ, ನಾಯಕ, ಕೆಲಸಗಾರ, ಭಾರತೀಯ ಮತ್ತು ವಿದೇಶಿಗ ಯಾರೇ ಆದರೂ ಇವುಗಳನ್ನೇ ಬಳಸಬೇಕಿತ್ತು. ಈ ಪ್ರಯೋಗವು ಸಾಂಪ್ರದಾಯಿಕ ಮನೋಧರ್ಮದ ಸಹವಾಸಿಗಳ ಮತ್ತು ಆಶ್ರಮದ ಮಹಿಳೆಯರಲ್ಲಿ ಮಲ ಸಂಗ್ರಹಣೆಯ ಬಗ್ಗೆ ಇದ್ದ ಪೂರ್ವಾಗ್ರಹವನ್ನು ಹೋಗಲಾಡಿಸಲು ಸಹಾಯ ಮಾಡಿತು.

'ಭಂಗಿ'ಗಳು ಮಾನವ ಮಲವನ್ನು ತಮ್ಮ ತಲೆ ಮೇಲೆ ಬಕೇಟುಗಳಲ್ಲಿ ಹೊತ್ತೊಯ್ಯುವ ದೃಶ್ಯ ಗಾಂಧಿ ಅವರನ್ನು ದುಃಖಕ್ಕೀಡು ಮಾಡಿತ್ತು. ಕೆಲವು ಸೂಕ್ತ ವಿಧಾನಗಳ ಮೂಲಕ ಹೇಗೆ ಸ್ವಚ್ಛತೆ ಕಾಪಾಡಬಹುದು ಎಂಬುದನ್ನು ಅವರು ವಿವರಿಸುತ್ತಿದ್ದರು. ಸ್ವಚ್ಛತಾ ಕಾರ್ಯವೂ ಒಂದು ಕಲೆ ಎಂಬುದನ್ನು ಗಾಂಧಿ ತಮ್ಮನ್ನು ತಾವು ಮಲಿನಗೊಳಿಸಿಕೊಳ್ಳದೇ ತೋರಿಸಿಕೊಟ್ಟರು.

ಅವರು ಬರೆಯುತ್ತಾರೆ "ಹಳ್ಳಿಯ ಸ್ವಚ್ಛ ಕೆರೆಯ ನೀರನ್ನು ಸ್ನಾನಕ್ಕೆ, ಬಟ್ಟೆ ಒಗೆಯಲು, ಕುಡಿಯಲು ಮತ್ತು ಅಡುಗೆಗೆ ಬಳಸುತ್ತಾರೆ. ಹಲವು ಕೆರೆಗಳಲ್ಲಿ ಹಸು, ಕರು, ಎಮ್ಮೆಗಳು ಮುಳುಗೇಳುತ್ತವೆ. ಆಶ್ಚರ್ಯಕರ ವಿಷಯವೆಂದರೆ, ಕೆರೆಗಳ ಈ ರೀತಿಯ ದುರ್ಬಳಕೆಯ ನಂತರವೂ ಹಳ್ಳಿಯ ಜನರು ಸಾಂಕ್ರಾಮಿಕ ರೋಗಗಳಿಂದ ಮುಕ್ತರಾಗಿರುವುದು!. ವೈದ್ಯಕೀಯ ಸಾಕ್ಷಿಗಳು ಸ್ವಚ್ಛ ಕುಡಿಯುವ ನೀರಿನ ಪೂರೈಕೆಯ ಕೊರತೆಯೇ ಹಲವು ಕಾಯಿಲೆಗಳಿಗೆ ಕಾರಣ ಎಂದು ಹೇಳುತ್ತವೆ. (ಹರಿಜನ, 8 ಫೆಬ್ರವರಿ 1935)

ವಿಶ್ವ ಆರೋಗ್ಯ ಸಂಸ್ಥೆಯು (WHO) ಭಾರತದ ಸ್ವಚ್ಛ ಭಾರತ ಮಿಶನ್‌ನ ಕಾರ್ಯಕ್ಕೆ ಶ್ಲಾಘನೆಯನ್ನು ವ್ಯಕ್ತಪಡಿಸಿದೆ. "ವಿಶ್ವ ಆರೋಗ್ಯ ಸಂಸ್ಥೆಯು ಸುರಕ್ಷಿತ ನೈರ್ಮಲ್ಯ ಸೇವೆಯನ್ನು ನೀಡುವಲ್ಲಿ ಭಾರತದ ಬದ್ಧತೆಯನ್ನು ಶ್ಲಾಘಿಸುತ್ತದೆ. 2014ರಲ್ಲಿ ದೇಶದಲ್ಲಿ ಆರಂಭವಾದ ಸ್ವಚ್ಛ ಭಾರತ ಮಿಶನ್ ಒಂದು ಉತ್ತಮ ಯೋಜನೆ. ಈ ಯೋಜನೆಯಲ್ಲಿ ಹೇಳಿರುವ ಪ್ರಕಾರ 2019ರ ಅಕ್ಟೋಬರ್‌ಗೆ ಪ್ರತಿಶತ ವ್ಯಾಪ್ತಿಯನ್ನು

ಸಾಧಿಸಿದರೆ, ಅತಿಸಾರ ಸಂಬಂಧೀ ಕಾಯಿಲೆ ಹಾಗೂ ಪ್ರೋಟೀನ್ ಎನರ್ಜಿ ಮಾಲ್ ನ್ಯೂಟ್ರಿಷನ್ (PEM) ನಿಂದಾಗುತ್ತಿತ್ತು. ಸುಮಾರು 3,00,000ಸಾವನ್ನು ತಡೆದಂತಾಗುತ್ತದೆ."

ಸ್ವಚ್ಛ ಭಾರತ ಮಿಶನ್ ವೆಬ್‌ಸೈಟ್ ಪ್ರಕಾರ 2018-19ರಲ್ಲಿ ಮನೆ ಬಳಕೆಯ ಶೌಚಾಲಯದ ವ್ಯಾಪ್ತಿಯು 90.14% ಇತ್ತು. ಓರಿಸ್ಸಾ 60.76%, ಬಿಹಾರ 63.32%, ಗೋವಾ 76.22% ಹಾಗೂ ಜಾರ್ಖಂಡ್‌ನಲ್ಲಿ 85.57% ಇತ್ತು. ಖುಷಿಯ ವಿಚಾರ ಎಂದರೆ ಆಂಧ್ರಪ್ರದೇಶ, ಛತ್ತೀಸ್‌ಗಡ್, ಅರುಣಾಚಲ ಪ್ರದೇಶ ರಾಜ್ಯಗಳು 100% ವ್ಯಾಪ್ತಿಯನ್ನು ಪೂರೈಸಿವೆ. ಭಾರತದಲ್ಲಿ ವಾರ್ಷಿಕ 2.64 ಕೋಟಿ ಶಿಶುಗಳು ಜನಿಸುತ್ತಿದ್ದು, 1000ಕ್ಕೆ 34 ಶಿಶುಗಳು ಮರಣ ಹೊಂದುವ 'ಶಿಶು ಮರಣ ಪ್ರಮಾಣ' ದಾಖಲಾಗಿದೆ.

ವಿಶ್ವ ಆರೋಗ್ಯ ಸಂಸ್ಥೆಯ ವರದಿ ಪ್ರಕಾರ 'ಸ್ವಚ್ಛ ಭಾರತ ಮಿಶನ್‌ನ ಪರಿಣಾಮಗಳನ್ನು ಮೌಲ್ಯೀಕರಿಸುವಾಗ ನೈರ್ಮಲ್ಯದ ಸುಧಾರಣೆಯಿಂದಾದ ಆರೋಗ್ಯದ ಲಾಭಗಳನ್ನು ಮಾತ್ರ ಪರಿಗಣಿಸಲಾಗಿದೆ. ಆದರೆ ಈ ಯೋಜನೆಯಿಂದ ವೈಯಕ್ತಿಕ ನೈರ್ಮಲ್ಯದಲ್ಲಿ ಬದಲಾವಣೆ ಹಾಗೂ ಸುರಕ್ಷಿತ ಕುಡಿಯುವ ನೀರಿನ ಸೇವನೆ ಮೂಲಕ ಮತ್ತಷ್ಟು ಹೆಚ್ಚುವರಿ ಆರೋಗ್ಯದ ಲಾಭಗಳಾಗುವ ಸಾಧ್ಯತೆ ಇದೆ. ಶುದ್ಧ ಕುಡಿಯುವ ನೀರಿನ ಪೂರೈಕೆಯಲ್ಲಿ, ನೈರ್ಮಲ್ಯ ಸೇವೆಯಲ್ಲಿ ಮತ್ತು ವೈಯಕ್ತಿಕ ನೈರ್ಮಲ್ಯದಲ್ಲಿ ಸುಧಾರಣೆಯಾದರೆ ಅದು ಆರೋಗ್ಯದ ಮೇಲೆ ಧನಾತ್ಮಕ ಪರಿಣಾಮ ಬೀರುತ್ತದೆ. ಎನ್ನುವುದಕ್ಕೆ ಸಾಕ್ಷಿಗಳಿವೆ. ಪೋಷಕಾಂಶ ಸ್ಥಿತಿ ಮತ್ತು ಅದರ ಲಾಭದಲ್ಲಿ ಏಳಿಗೆ, ಸಾಂಕ್ರಾಮಿಕ ರೋಗಗಳು, ನಿರ್ಲಕ್ಷಿತ ಉಷ್ಣವಲಯದ ಕಾಯಿಲೆಗಳು, ಅತಿಸಾರ, ಉಸಿರಾಟ ಸಂಬಂಧೀ ಸೋಂಕುಗಳ ಪ್ರಮಾಣದಲ್ಲಿ ಇಳಿಕೆ ಇತ್ಯಾದಿ. ಆದ್ದರಿಂದ ಈ ಎಲ್ಲ ಅಂಶಗಳನ್ನು ಪರಿಗಣಿಸಿದರೆ ಸ್ವಚ್ಛ ಭಾರತ ಮಿಶನ್, ಸಾರ್ವಜನಿಕ ಆರೋಗ್ಯದ ಮೇಲೆ ದೊಡ್ಡ ಪ್ರಮಾಣದಲ್ಲಿ ಸಕಾರಾತ್ಮಕ ಪ್ರಭಾವ ಬೀರಿರುವ ಸಾಧ್ಯತೆ ಇದೆ.

2014ರ ಸ್ವಚ್ಛ ಭಾರತ ಮಿಶನ್ ಆರಂಭಕ್ಕೂ ಮುನ್ನ, ಅಸುರಕ್ಷಿತ ನೈರ್ಮಲ್ಯದಿಂದಾಗಿ ವಾರ್ಷಿಕ 199 ಕೋಟಿ ಅತಿಸಾರದ ಪ್ರಕರಣಗಳು ದಾಖಲಾಗುತ್ತಿದ್ದವು. ಈಗ ಇದರ ಪ್ರಮಾಣ ನಿಧಾನವಾಗಿ ಇಳಿಮುಖವಾಗುತ್ತಿದೆ. 2019ರ ಅಕ್ಟೋಬರ್ ವೇಳೆಗೆ ಎಲ್ಲರಿಗೂ ಸುರಕ್ಷಿತ ನೈರ್ಮಲ್ಯ ಸೇವೆ ಲಭ್ಯವಾದರೆ ಈ ಸಮಸ್ಯೆ ಸಂಪೂರ್ಣವಾಗಿ ನಿವಾರಣೆ ಆಗುವ ಸಾಧ್ಯತೆ ಇದೆ.

ವಿಶ್ವ ಬ್ಯಾಂಕ್‌ನ ಅಧ್ಯಯನವೊಂದರ ಪ್ರಕಾರ ಭಾರತದ ಶೇ 40% ರಷ್ಟು ಮಕ್ಕಳು ನೈರ್ಮಲ್ಯದ ಕೊರತೆಯ ಕಾರಣದಿಂದಾಗಿ ದೈಹಿಕವಾಗಿ ಮತ್ತು ಗ್ರಹಿಕಾ ಸಾಮರ್ಥ್ಯದಲ್ಲಿ ಕುಂಠಿತಗೊಂಡಿದ್ದಾರೆ. ನಮ್ಮ ಭವಿಷ್ಯದ ದುಡಿಮೆಯ ಬಲವು, ಇಷ್ಟು ದೊಡ್ಡ ಪ್ರಮಾಣದಲ್ಲಿ ತಮ್ಮ ಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಲಾರದ ಸ್ಥಿತಿಗೆ ತಲುಪಿರುವುದು ಶೋಚನೀಯವೇ ಸರಿ. ನಮ್ಮ ಪ್ರಧಾನಶಕ್ತಿಯಾದ ಮಾನವ ಸಂಪನ್ಮೂಲಕ್ಕೆ ಇದು ಬಹುದೊಡ್ಡ ಆತಂಕದ ವಿಷಯವಾಗಿದೆ.

ಈ ಸಮಸ್ಯೆಯ ನಿವಾರಣೆಯು ಅಭಿವೃದ್ಧಿಯ ಮೂಲ ಮಂತ್ರ, ನಾವು ಜಾಗತಿಕವಾಗಿ ಆರ್ಥಿಕ ಸೂಪರ್ ಪವರ್ ಆಗುವ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕಾದರೆ, ಆದಷ್ಟು ಬೇಗ ಈ ಸಮಸ್ಯೆಯನ್ನು ನಿವಾರಿಸಿಕೊಳ್ಳುವುದು ಅನಿವಾರ್ಯ. ವಿಶ್ವ ಬ್ಯಾಂಕಿನ ಮತ್ತೊಂದು ಅಂದಾಜಿನ ಪ್ರಕಾರ ನೈರ್ಮಲ್ಯದ ಕೊರತೆಯು ನಮ್ಮ ಜಿ.ಡಿ.ಪಿ.ಯ ಸುಮಾರು 6 ಪ್ರತಿಶತ ವೆಚ್ಚಕ್ಕೆ ಕಾರಣವಾಗಿದೆ.

ನೈರ್ಮಲ್ಯೀಕರಣದಿಂದಾಗುವ ಆರ್ಥಿಕ ಪರಿಣಾಮಗಳ ಬಗ್ಗೆ ಇತ್ತೀಚೆಗೆ ಯುನಿಸೆಫ್ ಒಂದು ವರದಿಯನ್ನು ನೀಡಿತ್ತು. ಆ ವರದಿಯ ಪ್ರಕಾರ ಬಯಲು ಶೌಚದಿಂದ ಮುಕ್ತವಾಗಿರುವ ಹಳ್ಳಿಯ ಪ್ರತಿ ಕುಟುಂಬ, ವಾರ್ಷಿಕ ಸುಮಾರು 50,000 ರೂಪಾಯಿಗಳನ್ನು

ಉಳಿಸುತ್ತದೆ. (ವೈದ್ಯಕೀಯ ವೆಚ್ಚ, ಸಮಯದ ಉಳಿತಾಯ ಇತ್ಯಾದಿ) ಜೊತೆಗೆ, ಆ ಹಳ್ಳಿಗಳಲ್ಲಿ ಘನ ಮತ್ತು ದ್ರವ ತ್ಯಾಜ್ಯ ಸಂಪನ್ಮೂಲ ನಿರ್ವಹಣೆಯ ಮೂಲಕ ಬಹಳ ದೊಡ್ಡ ಪ್ರಮಾಣದಲ್ಲಿ 'ಕಸದಿಂದ ರಸ' ಉತ್ಪಾದಿಸಲು ಸಾಧ್ಯವಿದೆ.

ಈ ಅಧ್ಯಯನದ ಪ್ರಕಾರ ನೈರ್ಮಲ್ಯೀಕರಣದಿಂದಾಗಿ ಪ್ರತಿ ಕುಟುಂಬಕ್ಕೆ ದೊರಕುವ ಆರ್ಥಿಕ ಲಾಭ, ಸಂಚಿತ ಬಂಡವಾಳಕ್ಕಿಂತ (ಸರ್ಕಾರಗಳು ಮಾಡುವ ಖರ್ಚು ಹಾಗೂ ಹಣಕಾಸಿನ ಮೂಲಗಳು) 4.7 ಪಟ್ಟು ಹೆಚ್ಚಿದೆ. ನೈರ್ಮಲ್ಯೀಕರಣಕ್ಕೆ ಬಂಡವಾಳ ಹೂಡುವ ವಿಷಯಕ್ಕೆ ಸಂಬಂಧಿಸಿದಂತೆ ಇದು ಅತ್ಯಂತ ಸಂತಸದ ವಿಷಯ.

ಸ್ವಚ್ಛ ಭಾರತ ಮಿಶನ್‌ಗಾಗಿ ಸುಮಾರು 20 ಮಿಲಿಯನ್ ಡಾಲರ್ ಆಯವ್ಯಯವನ್ನು ಮೀಸಲಿಡಲಾಗಿದೆ. (ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡೂ ಸೇರಿ). ಖಾಸಗಿ ವಲಯ, ಸಂಘ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು ಮತ್ತು ಸಾರ್ವಜನಿಕರಿಂದ ಹೆಚ್ಚುವರಿ ಬಂಡವಾಳ ಹರಿದು ಬರುತ್ತಿದೆ.

ಸ್ವಚ್ಛ ಭಾರತ ನಿಧಿಗೆ ಈಗಾಗಲೇ ಸುಮಾರು 660 ಕೋಟಿ ರೂಪಾಯಿಯಷ್ಟು ಹಣ ಸಂಗ್ರಹವಾಗಿದೆ ಹಾಗೂ ಆ ಹಣವನ್ನು ಕೆಲವು ನಿರ್ದಿಷ್ಟ ನೈರ್ಮಲ್ಯ ಯೋಜನೆಗಳಿಗೆ ಬಿಡುಗಡೆ ಮಾಡಲಾಗಿದೆ. ಈ ನಿಧಿಗೆ ಸಾರ್ವಜನಿಕರು, ಕಂಪನಿಗಳು ಮತ್ತು ಸಂಘ ಸಂಸ್ಥೆಗಳು ಉದಾರ ದೇಣಿಗೆ ನೀಡಿವೆ. ಧಾರ್ಮಿಕ ಗುರು ಮಾತಾ ಅಮೃತಾನಂದಮಯಿ ಅವರೊಬ್ಬರೇ 100 ಕೋಟಿ ರೂಪಾಯಿ ಕೊಡುಗೆ ನೀಡಿದ್ದಾರೆ.

ಹಲವು ಖಾಸಗಿ ಕಂಪನಿಗಳು ತಮ್ಮ ಸಿ.ಎಸ್.ಆರ್.ನಿಧಿಯ ಸಹಾಯದಿಂದ ಸಾರ್ವಜನಿಕ ನೈರ್ಮಲ್ಯೀಕರಣಕ್ಕಾಗಿ ಕೆಲಸ

ಮಾಡುತ್ತಿವೆ. ಅವು ಶಾಲೆಗಳಲ್ಲಿ ನೈರ್ಮಲ್ಯ ಹೆಚ್ಚಿಸುವ ಕೆಲಸ ಮಾಡುತ್ತಿವೆ. ಇದು ಸಂತಸದ ವಿಷಯವೇನೋ ಹೌದು. ಆದರೆ ಸ್ವಚ್ಛ ಭಾರತ್ ಮಿಶನ್ ಅನುಷ್ಠಾನದಲ್ಲಿ ಖಾಸಗಿ ವಲಯದ ಸೃಜನಶೀಲತೆ ಮತ್ತು ಕಾರ್ಯಕ್ಷಮತೆಯನ್ನು ಉಪಯೋಗಿಸಿಕೊಂಡು ಇಡೀ ಯೋಜನೆಗೆ ಹೊಸತನ ನೀಡಲು ಬಹಳಷ್ಟು ಅವಕಾಶಗಳಿವೆ. ಎಲ್ಲಾ ಮಂತ್ರಿಗಳು ಮತ್ತು ಭಾರತ ಸರ್ಕಾರದ ವಿವಿಧ ಇಲಾಖೆಯವರು ತಮ್ಮ ತಮ್ಮ ಕ್ಷೇತ್ರಗಳಲ್ಲಿನ ಸುಧಾರಿತ ನೈರ್ಮಲ್ಯ ಕ್ರಮಗಳನ್ನು ಮುಖ್ಯ ವಾಹಿನಿಗೆ ತರುವ ಪ್ರಯತ್ನದಲ್ಲಿದ್ದಾರೆ. 2017–18ರ ಆರ್ಥಿಕ ವರ್ಷದಲ್ಲಿ ನೈರ್ಮಲ್ಯ ಹಾಗೂ ಸ್ವಚ್ಛತೆಗಾಗಿ ಸುಮಾರು 12,000 ಕೋಟಿ ರೂಪಾಯಿಗಳನ್ನು ಅವರು ಮೀಸಲಿರಿಸಿದ್ದಾರೆ.

ಸ್ವಚ್ಛ ಭಾರತ ಮಿಶನ್ ಈಗಾಗಲೇ ಫಲ ನೀಡಲು ಪ್ರಾರಂಭಿಸಿದೆ. ಈ ಯೋಜನೆಯು ಬಯಲು ಶೌಚ ಮಾಡುವವರ ಸಂಖ್ಯೆಯನ್ನು ಅತಿ ಕಡಿಮೆ ಮಟ್ಟಕ್ಕೆ ಅಂದರೆ 30 ಕೋಟಿಗೆ ಇಳಿಸುವಲ್ಲಿ ಯಶಸ್ವಿಯಾಗಿದೆ. ಈಗಾಗಲೇ 68% ಭಾರತೀಯರಿಗೆ ಸುರಕ್ಷಿತ ನೈರ್ಮಲ್ಯ ವ್ಯವಸ್ಥೆ ಕಲ್ಪಿಸಲಾಗಿದೆ.

ಇವತ್ತಿಗೂ ಹಲವು ಕಡೆ ಕೈಯಿಂದ ಕಲ್ಮಶ ಸಂಗ್ರಹಿಸುವ ವರದಿಗಳು ಬರುತ್ತಿದ್ದು, ಅದಕ್ಕಿನ್ನೂ ಪರಿಹಾರವೇ ಸಿಕ್ಕಿಲ್ಲ. "ಸಾರ್ವಜನಿಕ ರಸ್ತೆಗಳು ಮತ್ತು ಒಣ ಶೌಚಾಲಯಗಳಿಂದ ಮಾನವರ ಕಲ್ಮಶ ವಿಸರ್ಜನೆಯನ್ನು ಸಂಗ್ರಹಣೆ ಮಾಡುವುದು, ಸೆಪ್ಟಿಕ್ ಟ್ಯಾಂಕ್, ಚರಂಡಿ ಮತ್ತು ಕಾಲುವೆಗಳನ್ನು ಸ್ವಚ್ಛಗೊಳಿಸುವುದು" ಇವು, ಮನುಷ್ಯರು ಯಾವುದೇ ಉಪಕರಣಗಳ ಸಹಾಯವಿಲ್ಲದೇ ಕೈಯಿಂದ ಮಾಡುವುದು ಅತಿ ಕೆಟ್ಟ ಪದ್ಧತಿ. ಈ ಕೆಟ್ಟ ಪದ್ಧತಿಯು ಭಾರತದಲ್ಲಿನ್ನೂ ಅಸ್ತಿತ್ವದಲ್ಲಿ ಇರುವುದು ವಿಷಾದನೀಯ ಸಂಗತಿ. ಇದಕ್ಕೆ ಮುಖ್ಯ ಕಾರಣ ಜಾತಿ ಮತ್ತು ವರ್ಗ ತಾರತಮ್ಯ. ದೇಶದಲ್ಲಿ ಮಲಸಂಗ್ರಹ ಕಾರ್ಯದಲ್ಲಿರುವವರೆಲ್ಲ

ದಲಿತರೇ. ಅದರಲ್ಲೂ ಕೆಳಹಂತದಲ್ಲಿರುವ ದಲಿತರು ಅಥವಾ ತುಳಿತಕ್ಕೊಳಗಾದ ದಲಿತ ಉಪಜಾತಿಯವರು.

ಈ ಕೆಲಸದಲ್ಲಿಯೂ ಲಿಂಗ ಭೇದ ಸ್ಪಷ್ಟವಾಗಿ ಕಾಣುತ್ತದೆ. ಮಹಿಳಾ ಕೆಲಸಗಾರರೇ ಹಳ್ಳಿ ಮತ್ತು ನಗರ ಪ್ರದೇಶಗಳಲ್ಲಿ ಶೌಚಾಲಯದಿಂದ ಮಲ ಸಂಗ್ರಹಣೆ, ಸ್ವಚ್ಛತೆ ಮತ್ತು ಮಲ ಹೊತ್ತೊಯ್ಯುವ ಕೆಲಸದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುತ್ತಾರೆ. ಈ ಕೆಲಸಕ್ಕೆ ನೀಡುವ ಕೂಲಿ ಸಹ ಅತ್ಯಂತ ಕಡಿಮೆ. ದಾಖಲೆಗಳು ಹೇಳುವಂತೆ, ತಿಂಗಳಿಗೆ 150 ರೂಪಾಯಿಗಳು ಅಥವಾ ದಿನಕ್ಕೆ ಒಂದೋ ಎರಡೋ ರೊಟ್ಟಿ ಕೊಡುವುದು ರೂಢಿಯಲ್ಲಿದೆ. ಪುರುಷರು ಸೆಪ್ಟಿಕ್ ಟ್ಯಾಂಕ್, ಕಾಲುವೆ, ಚರಂಡಿ ಸ್ವಚ್ಛಗೊಳಿಸುತ್ತಾರೆ. ಇವೆರಡೂ ಸಹ ಅಹಿತಕರ, ಅನಾರೋಗ್ಯಕರ ಮತ್ತು ಜೀವವನ್ನೇ ಪಣಕ್ಕಿಡುವಂಥಹ ಕೆಲಸಗಳಾಗಿವೆ.

ಮೇಲ್ನೋಟಕ್ಕೆ ಈ ಪದ್ಧತಿಯ ಅಸ್ತಿತ್ವಕ್ಕೆ ಕಾರಣವಾದ ಮೂಲ ಅಪರಾಧಿಗಳು ಖಾಸಗಿಯವರಲ್ಲ. ಬದಲಿಗೆ, ಸಾರ್ವಜನಿಕ ವಲಯದವರು. ಉದಾಹರಣೆಗೆ ಭಾರತೀಯ ರೈಲ್ವೆಯು ಈ ಕೆಲಸ ಮಾಡುವವರಿಗಾಗಿ ಅತಿ ದೊಡ್ಡ ಉದ್ಯೋಗವಕಾಶ ಕಲ್ಪಿಸುತ್ತಿದೆ. ಇದರ ಪ್ರಮಾಣವನ್ನು ಕಂಡುಹಿಡಿಯುವುದು ಕಷ್ಟದ ವಿಷಯ. ಏಕೆಂದರೆ ಇಂದಿಗೂ ಸಹ ಬಹುತೇಕ ರೈಲುಗಳಲ್ಲಿ ಶೌಚ ವಿಲೇವಾರಿ ಮಾಡಲು ಬಹಳಷ್ಟು ಕೆಲಸಗಾರರು ಕಾಂಟ್ರಾಕ್ಟರ್‌ಗಳ ಮುಖಾಂತರ ಬರುತ್ತಾರೆ. ಅವರ ಆದಾಯ ದಿನಕ್ಕೆ ಸುಮಾರು 200 ರೂಪಾಯಿಗಳು. ಕೈಗೆ ಧರಿಸಲು ಗ್ಲೌಸ್ ಸಿಕ್ಕರೆ ಅದೇ ಅದೃಷ್ಟ. ಅವರಿಗೆ ದೊರಕುವ ರಕ್ಷಣಾ ಸೌಲಭ್ಯಗಳೂ ಸಹ ಇಲ್ಲವೆನ್ನುವಷ್ಟು ಕಡಿಮೆ. ಇಲ್ಲಿಯವರೆಗೆ ಅಂದಾಜು 1/3ರಷ್ಟು ಬೋಗಿಗಳು ಮಾತ್ರ ಆಧುನಿಕ ಜೈವಿಕ ಶೌಚಾಲಯವನ್ನು ಹೊಂದಿವೆ.

ಜಾತಿ ಆಧಾರಿತವಾದ ಹಾಗೂ ಬಲವಾಗಿ ಬೇರೂರಿದ ಕೈಯಿಂದ ಕಲ್ಮಶ ತೆಗೆಯುವ ಪದ್ಧತಿಯು ನಮ್ಮ ಸಾರ್ವಜನಿಕ ನೀತಿಯ ಒಂದು ಭಾಗವಾಗಿದೆ. ಸ್ವಚ್ಛ ಭಾರತ ಮಿಶನ್‌ನ ಯಶಸ್ಸು ಬಹುಮಟ್ಟಿಗೆ ಈ ಪದ್ಧತಿಯ ನಿವಾರಣೆಯ ಮೇಲೆಯೇ ಅವಲಂಬಿಸಿದೆ. ಆದ್ದರಿಂದ ಸ್ವಚ್ಛ ಭಾರತದ ನಾಲ್ಕು ಮುಖ್ಯ ಗುರಿಗಳು ಸ್ಪಷ್ಟವಾಗಿವೆ. "ಬಯಲು ಶೌಚ ಮುಕ್ತಗೊಳಿಸುವುದು, ಬರಿಗೈಯಿಂದ ಕಲ್ಮಶ ಸಂಗ್ರಹಣೆ ಮಾಡುವ ಪದ್ಧತಿಯ ನಿರ್ಮೂಲನೆ, ಆಧುನಿಕ ಹಾಗೂ ವೈಜ್ಞಾನಿಕ ಪದ್ಧತಿಯಿಂದ ಘನ ತ್ಯಾಜ್ಯ ನಿರ್ವಹಣೆ ಮಾಡುವುದು, ಆರೋಗ್ಯಕರ ನೈರ್ಮಲ್ಯ ಅಭ್ಯಾಸ," ಕುರಿತಂತೆ ನಡವಳಿಕೆಯಲ್ಲಿ ಬದಲಾವಣೆ ತರುವುದು. ಆದರೆ ಎಲ್ಲ ಪ್ರಯತ್ನ ಮತ್ತು ಸಂಪನ್ಮೂಲಗಳು ಮೊದಲನೆಯದರ ಮೇಲೆ ಕೇಂದ್ರೀಕೃತವಾಗಿವೆ. ಆದರೆ ಕೈಯಿಂದ ಕಲ್ಮಶ ಸ್ವಚ್ಛ ಮಾಡುವ ಪದ್ಧತಿಯ ನಿರ್ಮೂಲನೆ, ಆ ಕೆಲಸಗಾರರ ಪುನರ್ವಸತಿ ಹಾಗೂ ಇದಕ್ಕೆ ಸಂಬಂಧಿಸಿದ ಘನ ತ್ಯಾಜ್ಯ ನಿರ್ವಹಣೆ ಬಗ್ಗೆ ಯಾರೂ ಆಸಕ್ತಿಯನ್ನು ತೋರಿಸುತ್ತಿಲ್ಲ.

ಈಗ ಬಹಳ ದೊಡ್ಡ ಪ್ರಮಾಣದಲ್ಲಿ ಶೌಚಾಲಯಗಳು ನಿರ್ಮಾಣವಾಗುತ್ತಿವೆ. ಆದರೆ ಅವುಗಳನ್ನು ಸ್ವಚ್ಛ ಮಾಡುವ ಬಗ್ಗೆ ಒಂದು ನಿರ್ದಿಷ್ಟ ಕಾರ್ಯತಂತ್ರದ ಕೊರತೆ ಎದ್ದು ಕಾಣುತ್ತಿದೆ. ಶೌಚವನ್ನು ವೈಜ್ಞಾನಿಕ ಪದ್ಧತಿಯಲ್ಲಿ ವಿಸರ್ಜಿಸುವ ಬಗ್ಗೆ ಹಾಗೂ ಶೌಚಾಲಯಗಳಿಗೆ ನಿರಂತರ ನೀರಿನ ಸೌಲಭ್ಯ ಒದಗಿಸುವ ಬಗ್ಗೆ ಕಾಳಜಿ ತೋರಿಸಲಾಗುತ್ತಿಲ್ಲ. ಮಾನವ ಮಲಸಂಗ್ರಹಣೆ ಪದ್ಧತಿಯ ನಿರ್ಮೂಲನೆಗೆ ತಂತ್ರಜ್ಞಾನಾಧಾರಿತ ಉಪಕರಣಗಳನ್ನು ಉಪಯೋಗಿಸಲು ಬಂಡವಾಳವೇ ಇಲ್ಲದ ಪರಿಸ್ಥಿತಿ ಇದೆ.

ಈ ಯೋಜನೆಯಿಂದಾದ ಅತ್ಯಂತ ಪ್ರಮುಖ ಲಾಭ ಮತ್ತು ಅನುಕೂಲವೆಂದರೆ ಹೆಣ್ಣು ಮಕ್ಕಳ ಶಿಕ್ಷಣದಲ್ಲಿ ಅಭಿವೃದ್ಧಿ

ಆಗಿರುವುದು. ಈ ಹಿಂದೆ ಹಳ್ಳಿಗಳ ಶಾಲೆಗಳಲ್ಲಿ ಶೌಚಾಲಯ ವ್ಯವಸ್ಥೆ ಇಲ್ಲದ ಕಾರಣ, ಹೆಣ್ಣು ಮಕ್ಕಳು ಶಾಲೆಗೆ ಹೋಗಲು ಹಿಂದೇಟು ಹಾಕುತ್ತಿದ್ದರು. ಈಗ ಶಾಲೆಯ ಆವರಣದಲ್ಲಿಯೇ ಶೌಚಾಲಯಗಳು ನಿರ್ಮಾಣವಾದ ಕಾರಣ ಹೆಚ್ಚಿನ ಸಂಖ್ಯೆಯಲ್ಲಿ ಹೆಣ್ಣು ಮಕ್ಕಳು ಶಾಲೆಗೆ ಬರುತ್ತಿದ್ದಾರೆ. ಹಾಗೂ ಮಧ್ಯದಲ್ಲಿಯೇ ಶಾಲೆ ಬಿಡುವವರ ಸಂಖ್ಯೆಯೂ ನಿಧಾನವಾಗಿ ಇಳಿಮುಖವಾಗುತ್ತಿದೆ.

ನಾವೀಗಾಗಲೇ ಒಂದಿಷ್ಟು ಸಾಧನೆ ಮಾಡಿದ್ದರೂ ಸಹ ಮುಂದೆ ಮಾಡಬೇಕಾದ ಹಾಗೂ ಮಾಡದೇ ಉಳಿದ ಕೆಲಸಗಳು ತುಂಬಾ ಇವೆ. ಯೋಜನೆ ಮತ್ತು ಅನುಷ್ಠಾನದ ನಡುವೆ ಸಂಪರ್ಕವಿರಬೇಕು. ಮೌಲ್ಯಮಾಪನ ವರದಿಗಳು ನಿಖರವಾಗಿರಬೇಕು ಹಾಗೂ ಕ್ಷೇತ್ರ ಮಟ್ಟದ ವಸ್ತು ಸ್ಥಿತಿಗೆ ಆಧಾರವಾಗಿ ತಯಾರಾಗಬೇಕು. ಜೊತೆಗೆ ಎಲ್ಲ ಪಾಲುದಾರರನ್ನೂ ಈ ಯೋಜನೆಯ ಅನುಷ್ಠಾನದಲ್ಲಿ ಭಾಗಿಯಾಗಿಸುವುದು ಅತ್ಯಗತ್ಯ. ಅಂತೂ ಭಾರತದ ಕಾರ್ಪೋರೇಟ್ ಜಗತ್ತು ತನ್ನ ನಿದ್ರೆಯಿಂದ ಎಚ್ಚೆತ್ತುಕೊಂಡಿದ್ದು, ದೊಡ್ಡ ಸಮಾಧಾನದ ಸಂಗತಿ. ಸ್ವಚ್ಛ ಭಾರತ ನಿಧಿಗೆ ಅವರು ನೀಡುತ್ತಿರುವ ಕೊಡುಗೆಯಿಂದಾಗಿ ಸಂಪೂರ್ಣ ಕಾರ್ಯಕ್ರಮಕ್ಕೆ ಒಂದು ಚಾಲನಾ ಶಕ್ತಿ ದೊರೆತಂತಾಗಿದೆ. ಅಲ್ಲದೇ, ಸಿ.ಎಸ್.ಆರ್.ನ ಪರಿಕಲ್ಪನೆಗೆ ಹೆಚ್ಚು ಮೌಲ್ಯ ಒದಗಿಸಿದಂತಾಗಿದೆ.

ಮಹಾತ್ಮ ಗಾಂಧಿ ಅವರ ನೆನಪು ಮತ್ತು ಆದರ್ಶಗಳು ಇತರ ಸಾರ್ವಜನಿಕ ಕ್ಷೇತ್ರಗಳಲ್ಲಿಯೂ ಸಹ ಸಾಧನೆಗೆ ಪ್ರೇರಣೆಯಾದರೆ, ಅವರ 150ನೇ ಜನ್ಮದಿನಾಚರಣೆಯನ್ನು ಹೆಚ್ಚು ಅರ್ಥಪೂರ್ಣವಾಗಿ ನಾವು ಆಚರಿಸಿದಂತಾಗುತ್ತದೆ.

ಗಾಂಧೀಜಿ ಅವರ ಜೀವನ ಘಟನಾವಳಿಗಳು

ಪೋರಬಂದರದಲ್ಲಿ ಜನನ	ದಿ. 02.10.1869
ಕಸ್ತೂರ್‌ಬಾರೊಂದಿಗೆ ವಿವಾಹ	1881
ಮೆಟ್ರಿಕ್ಯುಲೇಶನ್ ಉತ್ತೀರ್ಣರಾದದ್ದು	1887
ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ	1888
ಬ್ಯಾರಿಸ್ಟರರಾಗಿ ದಾಖಲಾತಿ	1891
ಮರಳಿ ಭಾರತಕ್ಕೆ	1891
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	1893
ಭಾರತ ಸಂದರ್ಶನ	1896 ಮತ್ತು 1901
ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಂಡಿದ್ದು	1901
ಇಂಡಿಯನ್ ಒಪಿನಿಯನ್ ಪತ್ರಿಕೆಯ ಪ್ರಾರಂಭ	1903
ಫೀನಿಕ್ಸ್ ಆಶ್ರಮ ಸ್ಥಾಪನೆ	1904
ಬೋಯರ್ ಯುದ್ಧ ಮತ್ತು ಜೂಲು ದಂಗೆಯಲ್ಲಿ ಇಂಡಿಯನ್ ಅಂಬುಲೆನ್ಸ್‌ನ ಕೋರ್ ನೇತೃತ್ವ	1899 ಮತ್ತು 1906
ಬ್ರಹ್ಮಚರ್ಯ ವ್ರತ ಸ್ವೀಕಾರ	1906
ಇಂಗ್ಲೆಂಡಿಗೆ ಪ್ರಯಾಣ	1906 ಮತ್ತು 1909
ದಕ್ಷಿಣ ಆಫ್ರಿಕಾದಲ್ಲಿ ಪ್ರಥಮ ಜೈಲುವಾಸ	1908
ಟಾಲ್‌ಸ್ಟಾಯ್ ಆಶ್ರಮ ಸ್ಥಾಪನೆ	1910
ದಕ್ಷಿಣ ಆಫ್ರಿಕಾದಲ್ಲಿ ಚಾರಿತ್ರಿಕ ಸತ್ಯಾಗ್ರಹ ಆರಂಭ	1913
ಭಾರತಕ್ಕೆ ಆಗಮನ	1915
ಸಬರಮತಿ ಆಶ್ರಮ ಸ್ಥಾಪನೆ	1915
ಖೇಡಾದಲ್ಲಿ ಕರನಿರಾಕರಣೆ ಚಳುವಳಿ	1918
ಜಲಿಯನ್ ವಾಲಾಬಾಗ್ ಹತ್ಯಾಕಾಂಡ	1919
ಯಂಗ್ ಇಂಡಿಯಾ, ನವಜೀವನ ಪತ್ರಿಕೆಗಳ ಆರಂಭ	1919

ಅಸಹಕಾರ ಆಂದೋಲನ	1921
ಭಾರತದಲ್ಲಿ ಪ್ರಥಮ ಜೈಲುವಾಸ	1922
ಖಾದಿಗಾಗಿ ಪ್ರವಾಸ	1927
ಉಪ್ಪಿನ ಸತ್ಯಾಗ್ರಹ ಮತ್ತು ದಾಂಡೀಯಾತ್ರೆ	1930
ಯೂರೋಪು ಸಂದರ್ಶನ ಮತ್ತು ದುಂಡು ಮೇಜಿನ ಪರಿಷತ್ತು	1931
ಸೇವಾಗ್ರಾಮ ಆಶ್ರಮ ಸ್ಥಾಪನೆ	1933
ಹರಿಜನ ಸೇವೆಗಾಗಿ ನಿಧಿ ಸಂಗ್ರಹಣೆ	1933
ಹರಿಜನ್ ಸಾಪ್ತಾಹಿಕ ಪ್ರಾರಂಭ	1933
ನಯೀ ತಾಲೀಂ ಶಿಕ್ಷಣ ಪದ್ಧತಿ ಪ್ರಾರಂಭ	1937
"ಭಾರತ ಬಿಟ್ಟು ತೊಲಗಿ" ಚಳುವಳಿ	1942
ಕೊನೆಯ ಬಾರಿಗೆ ಆಗಾಖಾನ್ ಅರಮನೆಯಲ್ಲಿ ಸೆರೆವಾಸ	1942–44
ಹಂತಕನ ಗುಂಡೇಟಿಗೆ ಬಲಿ	ದಿ. 30–1–1948

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು

.	ಆರೋಗ್ಯ ರಹಸ್ಯ	10–00
.	ಕರ್ನಾಟಕದಲ್ಲಿ ಗಾಂಧೀ	5–00
.	ರಾಮನಾಮ	6–00
.	ಗಾಂಧೀ ಬಳಗದ ವಿದೇಶಿಯರು	40–00
.	ಆರೋಗ್ಯ	8–00
.	ಪ್ರಾರ್ಥನೆ	8–00
.	ಸತ್ಯಾಗ್ರಹ	8–00
.	ಮಹಿಳೆಯರಿಗಾಗಿ	8–00
.	ಪಂಚಾಯತ್ ರಾಜ್	12–00
0.	ಆದರ್ಶಗಳು	12–00
1.	ನಮ್ಮ ಗಾಂಧೀ ತಾತ	25–00
2.	ದೇವನಗರಿಯಲ್ಲಿ ಗಾಂಧೀ ಧ್ವನಿ	2–00
3.	ನಮ್ಮ ಗಾಂಧೀ ತಾತ	15–00
4.	ಹೋರಾಟ ಶ್ರೀ	40–00
5.	ಮಹಾತ್ಮ ಗಾಂಧೀಜಿ ಅವರ ಜೀವನ ಮೈಲಿಗಲ್ಲುಗಳು	3–00
6.	ಗಾಂಧೀಜಿ ಜೀವನ ಚರಿತ್ರೆ	25–00
7.	ಕುವೆಂಪು ಕಂಡ ಗಾಂಧೀ	25–00
8.	ಉಪ್ಪಿನ ಸತ್ಯಾಗ್ರಹ	5–00
9.	ಹಿಂದ್ ಸ್ವರಾಜ್	50–00
0.	ಗಾಂಧೀ ಮತ್ತು ಆಧ್ಯಾತ್ಮಿಕ ಜೀವನ	25–00
1.	ನನ್ನ ಕನಸಿನ ಭಾರತ	30–00
2.	ಹಿಂದೂ ಧರ್ಮ	25–00
3.	ಮಹಿಳೆಯರು	30–00
4.	ಸ್ವಾತಂತ್ರ್ಯ	25–00
5.	ಅಸ್ಪೃಶ್ಯತೆ	30–00
6.	ಒಳ್ಳೆಯ ಜೀವನ	25–00
7.	ಪ್ರಾರ್ಥನೆ	25–00

28.	ಗಾಂಧೀ ಮತ್ತು ಕರ್ನಾಟಕ	200–00
29.	ಸತ್ಯ	30–00
30.	ವಿದ್ಯಾರ್ಥಿಗಳಿಗಾಗಿ	30–00
31.	ಸರ್ವೋದಯ	30–00
32.	ಖಾದಿ ಗ್ರಾಮೋದ್ಯೋಗ	30–00
33.	ನನ್ನ ಬಾಲ್ಯದ ನೆನಪುಗಳು	30–00
34.	ಗ್ರಾಮರಾಜ್ಯ ಆಡಳಿತ	5–00
35.	ನನ್ನ ಕನಸಿನ ಸ್ವರಾಜ್ಯ	5–00
36.	ಗಾಂಧೀ ಮತ್ತು ಹಾಸ್ಯ	20–00
37.	ನನ್ನ ಆದರ್ಶಗ್ರಾಮ	5–00
38.	ಮಹಾತ್ಮ ಗಾಂಧೀ ವಿಚಾರಗಳು ಹಾಗೂ ವ್ಯವಸ್ಥಾಪನ ಪದ್ದತಿ	48–00
39.	ಸತ್ಯಾಗ್ರಹಿ	40–00
40.	ಗ್ರಾಮದಾನ ಗ್ರಾಮ ಸ್ವರಾಜ್ಯ	25–00
41.	ಗಾಂಧೀಜಿಯವರ ಪ್ರಾತ: ಸಾಯಂ ಪ್ರಾರ್ಥನೆ ಮತ್ತು ಭಜನೆ	
42.	ಉಪ್ಪಿನ ಸತ್ಯಾಗ್ರಹ ಮತ್ತು ಮೈಲಾರ ಮಹಾದೇವ	5–00
43.	ಸತ್ಯಾಗ್ರಹ	5–00
44.	ಹಿಂದ್ ಸ್ವರಾಜ್	5–00
45.	ಆರೋಗ್ಯ	5–00
46.	ಮಹಾತ್ಮ ಗಾಂಧಿ ಪ್ರಸ್ತುತತೆ	10–00
47.	ಬಹುರೂಪಿ ಗಾಂಧಿ	10–00
48.	ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ	30–00
49.	ಕೃತಯುಗಿ ವಿನೋಬಾ ಭಾವೆ	15–00
50.	ಮೋಹನ ತರಂಗ	40–00
51.	ನಮ್ಮ ಗಾಂಧಿ ತಾತ	5–00
52.	ಗೀತಾ ಪ್ರವಚನ	80–00
53.	ಜೆ.ಪಿ. ಜೀವನ ಹಾದಿ	45–00
54.	ಗಣ್ಯರು ಕಂಡಂತೆ ಗಾಂಧಿ	20.0

55.	ಗೀತಾಮಾತೆ	80.00
56.	ಲೋಕ ಚಿಂತಕರು	145.00
57.	ಕರ್ನಾಟಕದ ಕಸ್ತೂರ್‌ಬಾ ಯಶೋಧರಮ್ಮ ದಾಸಪ್ಪ	38.00
58.	ಮಹದೇವ ದೇಸಾಯಿ	63.00
59.	ಸಮಾಜವಾದ : ಗಾಂಧೀ ದೃಷ್ಟಿಕೋನ	15.00
60.	ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ	28.00
61.	Temple & Mosque	10–00
62.	Rastrapita Mahatma Gandhi	25–00
63.	Swarajya of My Dreams	5–00
64.	Gandhi My Grand Father	5–00
65.	Grand Pa Gandhi	5–00
66.	Relevance of Gandhi	20–00
67.	Vinoba Sage of the age	20.00

ಕರ್ನಾಟಕದಲ್ಲಿ ಗಾಂಧೀಜಿ ಭೇಟಿ ನೀಡಿದ ಸ್ಥಳಗಳು

● ಬೆಂಗಳೂರು	ದಿ. **08-05-1915**
● ಬೆಳಗಾವಿ	ದಿ. **27-04-1916** ರಿಂದ ದಿ. **01-05-1916** ರವರೆಗೆ
● ಬಿಜಾಪುರ (ವಿಜಯಪುರ)	ದಿ. **05-05-1918** ರಿಂದ ದಿ. **06-05-1918** ರವರೆಗೆ
● ಕಾಸರಗೋಡು	ದಿ. **19-08-1920**
● ಮಂಗಳೂರು	ದಿ. **20-08-1920**
● ಬೆಂಗಳೂರು	ದಿ. **21-08-1920**
● ನಿಪ್ಪಾಣಿ, ಚಿಕ್ಕೋಡಿ, ಹುಕ್ಕೇರಿ ಸಂಕೇಶ್ವರ, ಬೆಳಗಾವಿ	ದಿ. **08-11-1920**
● ಬೆಳಗಾವಿ ಶಹಾಪುರ ಖಾನಾಪುರ, ನಂದಗಢ ಹಳ್ಯಾಳ	ದಿ. **09-11-1920**
● ಧಾರವಾಡ	ದಿ. **10-11-1920**
● ಹುಬ್ಬಳ್ಳಿ, ಗದಗ	ದಿ. **11-11-1920**
● ಸಾಂಗಲಿ	ದಿ. **12-11-1920**
● ಬಾಗಲಕೋಟೆ	ದಿ. **27-05-1921**
● ಬಿಜಾಪುರ (ವಿಜಯಪುರ), ಸೊಲ್ಲಾಪುರ	ದಿ. **28-05-1921**
● ಬಳ್ಳಾರಿ	ದಿ. **30-09-1921**
● ಬೆಳಗಾವಿ	ದಿ. **21-12-1924** ರಿಂದ ದಿ. **30-12-1924** ರವರೆಗೆ
● ಗುಲ್ಬರ್ಗಾ	ದಿ. **22-02-1927** ರಿಂದ ದಿ. **23-02-1927** ರವರೆಗೆ
● ನಿಪ್ಪಾಣಿ	ದಿ. **27-03-1927** ರಿಂದ ದಿ. **31-03-1927** ರವರೆಗೆ

● ಬೆಳಗಾವಿ	ದಿ. 01-04-1927
	ದಿ. 18-04-1027 ರಿಂದ ದಿ. 19-04-1927ರವರೆಗೆ
● ಬೆಂಗಳೂರು	ದಿ. 06-06-1927 ರಿಂದ ದಿ. 13-07-1927 ರವರೆಗೆ
● ತುಮಕೂರು	ದಿ. 14-07-1927
● ತುಮಕೂರು, ಮಧುಗಿರಿ	ದಿ. 15-07-1927
● ತುಮಕೂರು	ದಿ. 16-07-1927
● ಬೆಂಗಳೂರು	ದಿ. 17-07-1927
● ಬೆಂಗಳೂರು	ದಿ. 18-07-1927
● ಮೈಸೂರು	ದಿ. 19-07-1927 ರಿಂದ ದಿ. 21-07-1927 ರವರೆಗೆ
● ಕೃಷ್ಣರಾಜಸಾಗರ, ಯಡತೊರೆ ಶ್ರೀರಂಗಪಟ್ಟಣ, ದರಿಯಾದೌಲತ್	ದಿ. 22-07-1927
● ಮೈಸೂರು	ದಿ. 23-07-1927
● ಬೆಂಗಳೂರು	ದಿ. 24-07-1927 ರಿಂದ ದಿ. 30-07-1927 ರವರೆಗೆ
● ಕ್ಲೋಸ್‌ಪೇಟೆ (ರಾಮನಗರ)	ದಿ. 31-07-1927
● ಕಾನಕಾನಹಳ್ಳಿ (ಕನಕಪುರ)	
● ಬೆಂಗಳೂರು	ದಿ. 01-08-1927
● ಅರಸೀಕರೆ, ಹಾಸನ	ದಿ. 02-08-1927
● ಹಾಸನ	ದಿ. 03-08-1927
● ಹಾಸನ, ಹೊಳೆನರಸೀಪುರ	ದಿ. 04-08-1927
● ಬೆಂಗಳೂರು	ದಿ. 05-08-1927 ರಿಂದ ದಿ. 11-08-1927 ರವರೆಗೆ
● ದಾವಣಗೆರೆ	ದಿ. 12-08-1927
● ಹರಿಹರ, ಹೊನ್ನಾಳಿ ಮಲೆಬೆನ್ನೂರು	ದಿ. 13-08-1927

● ಶಿವಮೊಗ್ಗ	ದಿ. 14-08-1927 ರಿಂದ ದಿ. 15-08-1927 ರವರೆಗೆ
● ಆಯನೂರು, ಕುಂಸಿ, ಸಾಗರ ಶಿವಮೊಗ್ಗ	ದಿ. 16-08-1927
● ಶಿವಮೊಗ್ಗ, ತೀರ್ಥಹಳ್ಳಿ ಮಂದಗದ್ದೆ, ರಾಜನೂರು	ದಿ. 17-08-1927
● ಭದ್ರಾವತಿ, ತರೀಕೆರೆ	ದಿ. 18-08-1927
● ಬೀರೂರು, ಕಡೂರು	
● ಚಿಕ್ಕಮಗಳೂರು	ದಿ. 19-08-1927
● ಬೇಲೂರು, ಹಳೇಬೀಡು	ದಿ. 20-08-1927
● ಅರಸೀಕೆರೆ	
● ತಿಪಟೂರು	ದಿ. 21-08-1927
● ಬೆಂಗಳೂರು	ದಿ. 22-08-1927
● ಬೆಂಗಳೂರು	ದಿ. 23-08-1927
● ಹೊಸೂರು, ಸೂಳಗಿರಿ ಕೃಷ್ಣಗಿರಿ	ದಿ. 24-08-1927
● ಬೆಂಗಳೂರು	ದಿ. 25-08-1927 ರಿಂದ ದಿ. 30-08-1927 ರವರೆಗೆ
● ಹಿಂದೂಪುರ, ವಿಧುರಾಶ್ವತ್ಥ ಗೌರಿಬಿದನೂರು ದೊಡ್ಡಬಳ್ಳಾಪುರ, ತುಮಕೂರು ತ್ಯಾಮಗೊಂಡ್ಲು, ನೆಲಮಂಗಲ ಬೆಂಗಳೂರು, ಮೈಸೂರು	ದಿ. 04-01-1934
● ತಗಡೂರು, ಬದನವಾಳ ನಂಜನಗೂಡು, ಮೈಸೂರು	ದಿ. 05-01-1934
● ಮಂಡ್ಯ, ಚನ್ನಪಟ್ಟಣ, ರಾಮನಗರ ಕನಕಪುರ, ಬಿಡದಿ, ಕೆಂಗೇರಿ	ದಿ. 06-01-1934

- ಬೆಂಗಳೂರು ದಿ. 07-01-1934 ರಿಂದ
  ದಿ. 09-01-1934 ರವರೆಗೆ
- ಪೊನ್ನಂಪೇಟೆ, ಹುದಿಕೇರಿ ದಿ. 22-02-1934
- ವಿರಾಜಪೇಟೆ, ಬೆಳ್ಳೂರು ದಿ. 23-02-1934
- ಸೋಮವಾರ ಪೇಟೆ
- ಗುಂಡುಕಟ್ಟೆ
- ಮಡಿಕೇರಿ, ಸಂಪಾಜೆ, ಸುಳ್ಯ ದಿ. 24-02-1934
- ಪುತ್ತೂರು, ಉಪ್ಪಿನಂಗಡಿ
- ವಿಠಲಗಬ್ಬ, ಕಲ್ಲಡ್ಕ, ಪಾಣೆ
- ಮಂಗಳೂರು, ಬಂಟ್ವಾಳ
- ಮಂಗಳೂರು
- ಮಂಗಳೂರು, ಗುರುಪುರ, ಬಜ್ಪೆ ದಿ. 25-02-1934
  ಯಕ್ಕೂರು, ಕಟೀಲು, ಕಿನ್ನಗೋಳಿ
  ಮೂಲ್ಕಿ, ಪಡುಬಿದ್ರಿ, ಕಾಟಪಾಡಿ
  ಗುರುಪುರ, ಉದ್ಯಾವರ
  ಉಡುಪಿ, ಬ್ರಹ್ಮಾವರ, ಸಿದ್ದಾಪುರ
- ಕುಂದಾಪುರ ದಿ. 26-02-1934
- ಕುಂದಾಪುರ, ಭಟ್ಕಳ ದಿ. 27-02-1934
  ಹೊನ್ನಾವರ, ಕಾರವಾರ
- ಕಾರವಾರ, ಕುಮುಟಾ, ಅಂಕೋಲ ದಿ. 28-02-1934
  ಚಂದಿಯಾ, ಶಿರಸಿ
- ಶಿರಸಿ, ಸಿದ್ದಾಪುರ, ದಾಸನಕೊಪ್ಪ ದಿ. 01-03-1934
  ಇಸಲೂರು, ಏಕಾಂಬಿ, ಆಲೂರು
  ಬ್ಯಾಡಗಿ, ಮೋಟೆಬೆನ್ನೂರು
- ಹಾವೇರಿ, ರಾಣೆಬೆನ್ನೂರು, ಹರಿಹರ ದಿ. 02-03-1934
  ದಾವಣಗೆರೆ, ಹರಪನಹಳ್ಳಿ, ಕೊಟ್ಟೂರು
  ಕೂಡ್ಲಿಗೆ, ದುಗ್ಗಾವತಿ, ಕಣಿವೆಹಳ್ಳಿ
  ಸೊಂಡೂರು

● ಸೊಂಡೂರು, ಬಳ್ಳಾರಿ, ಹೊಸಪೇಟೆ ಭಾನಾಪುರ, ಗದಗ, ಜಕ್ಕಲಿ, ಹುಬ್ಬಳ್ಳಿ	ದಿ. 03-03-1934
● ಹುಬ್ಬಳ್ಳಿ, ಧಾರವಾಡ, ಅಮ್ಮಿನಭಾವಿ ಹಿರೇಉಳ್ಳಗೇರಿ, ಬೈಲಹೊಂಗಲ ಉಪ್ಪಿನ, ಬೆಟಗೇರಿ, ಸೌಂದತ್ತಿ ಸಂಪಗಾಂವ್, ಹೊಸೂರು, ಬೆಳಗಾವಿ	ದಿ. 04-03-1934
● ಬೆಳಗಾವಿ	ದಿ. 05-03-1934
● ಬೆಳಗಾವಿ	ದಿ. 06-03-1934
● ಬೆಳಗಾವಿ, ಯಮಕನಮರಡಿ ಹುಕ್ಕೇರಿ, ಗೋಕಾಕ, ಸಂಕೇಶ್ವರ ನವಲೀಹಾಳ, ಚಿಕ್ಕೋಡಿ, ಅಂಕಲಿ	ದಿ. 07-03-1934
● ಶೆಡಬಾಳ, ಬನಹಟ್ಟಿ, ಅಥಣಿ ಬಿಜಾಪುರ (ವಿಜಯಪುರ), ತಿಕೋಟ, ತೊರವಿ ಇಳಕಲ್	ದಿ. 08-03-1934
● ನಂದಿ ಬೆಟ್ಟ	10-05-1936 ರಿಂದ 30-05-1936 ರವರೆಗೆ
● ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ ಕೋಲಾರ, ಬಂಗಾರ ಪೇಟೆ, ಕೆ. ಜಿ. ಎಫ್	31-05-1936
● ಬೆಂಗಳೂರು	01-06-1936 ರಿಂದ 12-06-1936 ರವರೆಗೆ
● ಬೆಳಗಾವಿ ಜಿಲ್ಲೆಯ ಹುದಲಿ	16-04-1937 ರಿಂದ 21-04-1937ರವರೆಗೆ

ಏಕಾದಶ ವ್ರತಗಳು

ಸತ್ಯ	Truth
ಅಹಿಂಸೆ	Ahimsa or Love
ಅಸ್ತೇಯ (ಕದಿಯದಿರುವುದು)	Non-Stealing
ಬ್ರಹ್ಮಚರ್ಯ	Brahmacharya or Chastity
ಅಸಂಗ್ರಹ (ಅಪರಿಗ್ರಹ)	Non-Possession
ಶರೀರ ಶ್ರಮ	Physical Labour
ಅಸ್ವಾದ (ನಾಲಿಗೆ ಚಪಲ)	Control on the Palate
ಸರ್ವತ್ರ ಭಯವರ್ಜನ (ಅಭಯ)	Fearlessness
ಸರ್ವಧರ್ಮ ಸಮಾನತ್ವ	Equality of Religion
ಸ್ವದೇಶಿ	Swadeshi
ಸ್ಪರ್ಶ ಭಾವನೆ (ಅಸ್ಪೃಶ್ಯತಾ ನಿವಾರಣೆ)	Removal of Untouchability

ಏಳು ಸಾಮಾಜಿಕ ಪಾತಕಗಳು	Seven Social Sins
ತತ್ವರಹಿತ ರಾಜಕಾರಣ	Politics without Principles
ದುಡಿಮೆ ಇಲ್ಲದ ಸಂಪತ್ತು	Wealth without Work
ಆತ್ಮಸಾಕ್ಷಿ ಇಲ್ಲದ ಸಂತೋಷ	Pleasure without Conscience
ಚಾರಿತ್ರ್ಯವಿಲ್ಲದ ಶಿಕ್ಷಣ	Education without Character
ನೀತಿ ಇಲ್ಲದ ವ್ಯಾಪಾರ	Commerce without Morality
ಮಾನವೀಯತೆ ಇಲ್ಲದ ವಿಜ್ಞಾನ	Science without Humanity
ತ್ಯಾಗ ಇಲ್ಲದ ಪೂಜೆ	Worship without Sacrifice

– ಮಹಾತ್ಮ ಗಾಂಧೀಜಿ

ಹದಿನೆಂಟು ರಚನಾತ್ಮಕ ಕಾರ್ಯಗಳು
18 CONSTRUCTIVE PROGRAMMES

ಮತೀಯ ಐಕ್ಯತೆ	**Communal Unity**
ಅಸ್ಪೃಶ್ಯತಾ ನಿವಾರಣೆ	**Removal of Untouchability**
ಪಾನನಿರೋಧ	**Prohibition**
ಖಾದಿ	**Khadi**
ಇತರೆ ಗ್ರಾಮೋದ್ಯೋಗಗಳು	**Other village industries**
ಗ್ರಾಮ ನೈರ್ಮಲ್ಯ	**Village Sanitation**
ಮೂಲ ಶಿಕ್ಷಣ	**Basic Education**
ವಯಸ್ಕರ ಶಿಕ್ಷಣ	**Adult Education**
ಮಹಿಳಾ ಸಬಲೀಕರಣ	**Women Empowerment**
ಆರೋಗ್ಯ ಮತ್ತು ಶುಚಿತ್ವ ಶಿಕ್ಷಣ	**Hygiene & Health Education**
ಪ್ರಾದೇಶಿಕ ಭಾಷೆ	**Provincial Languages**
ರಾಷ್ಟ್ರಭಾಷೆ	**National Language**
ಆರ್ಥಿಕ ಸಮಾನತೆ	**Economic Equality**
ರೈತರ ಸಬಲೀಕರಣ	**Empowerment of Farmers**
ಕಾರ್ಮಿಕರ ಸಬಲೀಕರಣ	**Empowerment of Labours**
ಆದಿವಾಸಿ ಸಬಲೀಕರಣ	**Tribal Empowerment**
ಕುಷ್ಠರೋಗ ನಿರ್ಮೂಲನೆ	**Cure of Leprocy**
ವಿದ್ಯಾರ್ಥಿಗಳು	**Students**

[illegible]
[illegible] CONSTRUCTIVE PROGRAMMES

[illegible]	Constructive Work
[illegible]	Removal of Untouchability
[illegible]	Prohibition
[illegible]	Khadi
[illegible]	Other Village Industries
[illegible]	Village Sanitation
[illegible]	Basic Education
[illegible]	Adult Education
[illegible]	Women Empowerment
[illegible]	Hygiene & Health Education
[illegible]	Provincial Languages
[illegible]	National Language
[illegible]	Economic Equality
[illegible]	Empowerment of Farmers
[illegible]	Empowerment of Labours
[illegible]	Tribal Empowerment
[illegible]	Care of Leprosy
[illegible]	Students

[illegible]

"ರಾಜಕೀಯ ಸ್ವಾತಂತ್ರ್ಯಕ್ಕಿಂತ ನೈರ್ಮಲ್ಯೀಕರಣ ಹೆಚ್ಚು ಮಹತ್ವದ್ದು". "ನೀವು ಎಲ್ಲಿಯವರೆಗೆ ಕಸಬರಿಗೆ ಮತ್ತು ಬುಟ್ಟಿಯನ್ನು ಕೈಯಲ್ಲಿ ಹಿಡಿಯುವುದಿಲ್ಲವೋ ಅಲ್ಲಿಯವರೆಗೆ ನಿಮ್ಮ ನಗರವನ್ನು ಸ್ವಚ್ಛವಾಗಿಡಲು ಸಾಧ್ಯವಿಲ್ಲ". "ನೀವು ನಿಮ್ಮ ಶಾಲೆಯನ್ನು ಮಾದರಿ ಶಾಲೆಯನ್ನಾಗಿ ಮಾಡಬೇಕೆಂದರೆ ಮಕ್ಕಳಿಗೆ ಕೇವಲ ಅಕ್ಷರಾಭ್ಯಾಸ ಮಾಡಿಸಿದರೆ ಮಾತ್ರ ಸಾಕಾಗುವುದಿಲ್ಲ. ಜೊತೆಗೆ ಅವರನ್ನು ಅಡುಗೆ ಮಾಡುವವರು ಹಾಗೂ ಕಸ ಗುಡಿಸುವವರನ್ನಾಗಿ ಸಹ ಮಾಡಬೇಕು." 1946ರ ಸೆಪ್ಟೆಂಬರ್‌ನಲ್ಲಿ ನವದೆಹಲಿಯಲ್ಲಿ ತಮ್ಮ ಭಾಷಣವೊಂದರಲ್ಲಿ ಹೇಳಿದ್ದರು. "ದುಃಖದಾಯಕ ವಿಷಯವೆಂದರೆ ವೈಸ್‌ರಾಯ್ ಅವರ ಮನೆಯಲ್ಲಿ ದುಡಿಯುವ ಕೆಲಸಗಾರರು ಮತ್ತು ಕಸಗುಡಿಸುವವರ ವಸತಿ ಸಮುಚ್ಛಯವು ಅತ್ಯಂತ ಕೊಳಕಾಗಿದೆ. ಅಧಿಕಾರಿಗಳ ಸೇವಕರ ಮನೆಗಳೂ ಸ್ವಚ್ಛ ಮತ್ತು ಶಿಸ್ತಿನಿಂದ ಕೂಡಿರುವ ದೃಶ್ಯ ಮಾತ್ರ ನನಗೆ ತೃಪ್ತಿ ಕೊಡಲು ಸಾಧ್ಯ".

- ಮಹಾತ್ಮ ಗಾಂಧಿ

'ಬೊಗಸೆಯಲ್ಲಿ ಸಾಗರ' ಎಂಬ ಮಾತಿದೆ. ಒಂದು ಒಳ್ಳೆಯ ಕೃತಿ ಸಂಕ್ಷಿಪ್ತತೆಯಲ್ಲಿ ಅಗಾಧತೆಯನ್ನು ಸಾರುತ್ತದೆ. ಈ ಪುಟ್ಟ ಕೃತಿಯು ಗಾಂಧೀಜಿ ಅವರ ಸ್ವಚ್ಛತೆಯ ಪರಿಕಲ್ಪನೆಯನ್ನು ಸ್ಪಷ್ಟವಾಗಿ ಮುಂದಿಡುವಲ್ಲಿ ಸಾರ್ಥಕವಾಗಿದೆ.

- ಡಾ. ಗಣನಾಥ ಶೆಟ್ಟಿ ಎಕ್ಕಾರು

ಈ ಕೃತಿಯಲ್ಲಿ ನಿರ್ಮಲ ಭಾರತಕ್ಕಾಗಿ ಕೈಗೊಂಡ ಬೃಹತ್ ಕಾರ್ಯಗಳ ಪಕ್ಷಿನೋಟವಿದೆ. ಹಾಗೂ ಈ ಕಾರ್ಯದಲ್ಲಿ ತಮ್ಮನ್ನು ಆಜೀವ ಪರ್ಯಂತ ತೆತ್ತುಕೊಂಡ ಹೆಣ್ಣು ಮಕ್ಕಳ ಸ್ಥಿತಿಗತಿಯ ಬಗ್ಗೆ ವಿಶ್ಲೇಷಣೆ ಇದೆ.

- ಇಂದಿರಾ ಕೃಷ್ಣಪ್ಪ

ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು

ISBN NO : 978-81-941136-2-1